ಸಂಪುಟ: 01 ಸಂಚಿಕೆ: 99 ಪುಟ: 04 ಬೆಲೆ: 02 ಶುಕ್ರವಾರ ಸೆಪ್ಟೆಂಬರ್ 25 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 99 Pages:04 Price:02 FRIDAY SEPTEMBER 25 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಎಲ್ಲದರಿಂದ ಎಷ್ಟು ಮುಕ್ತವಾಗುತ್ತಿಯೋ ಅಷ್ಟು ಬೇಗ ಶುದ್ಧವಾಗಿ ಅನಂತವಾಗುವೆ.

ವಾಣಿ ಭಂಡಾರಿ.

# ಶಿಕ್ಷಕರಿಗೆ ಬೋಧನೇತರ ಕರ್ತವ್ಯಗಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರದಿಂದ ಹೊಸ ಕಾನೂನು

**ಬೆಂಗಳೂರು: ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಶಿಕ್ಷಕರನ್ನು ಬೋಧನೆಯ ಹೊರಗಿನ ಕರ್ತವ್ಯಗಳಿಗೆ ನಿಯೋಜಿಸುವ ಪದ್ಧತಿಗೆ ಕಡಿವಾಣ ಹಾಕಲು ಕರ್ನಾಟಕ ಸರ್ಕಾರ ಹೊಸ ಕಾನೂನಿನ ಕರಡು ಸಿದ್ಧಪಡಿಸಿದೆ. ಮತದಾರರ ಪಟ್ಟಿ ಪರಿಷ್ಕರಣೆ, ಚುನಾವಣೆ ಹಾಗೂ ಜನಗಣತಿಯಂತಹ ಕರ್ತವ್ಯಗಳಿಂದ ಶಿಕ್ಷಕರನ್ನು ಸಾಧ್ಯವಾದಷ್ಟು ದೂರವಿಟ್ಟು, ಅವರ ಮೂಲ ಜವಾಬ್ದಾರಿಯಾದ ತರಗತಿ ಬೋಧನೆಗೆ ಆದ್ಯತೆ ನೀಡುವುದು ಕರಡು ಕಾಯ್ದೆಯ ಪ್ರಮುಖ ಉದ್ದೇಶವಾಗಿದೆ. ಕರಡು ಪ್ರಸ್ತಾವನೆಯನ್ನು ವಿವಿಧ ಇಲಾಖೆಗಳ ಒಪ್ಪಿಗೆಗಾಗಿ ಕಳುಹಿಸಲಾಗಿದೆ.**

2026ರ ಜೂನ್ 20ರಿಂದ ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಆರಂಭವಾಗಿತ್ತು. ಜೂನ್ 30ರಿಂದ ಮನೆ-ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವ ಕಾರ್ಯ ಆರಂಭಗೊಂಡಿದ್ದು, ರಾಜ್ಯದಲ್ಲಿ ಸಾವಿರಾರು ಶಿಕ್ಷಕರು ಬೂತ್ ಮಟ್ಟದ ಅಧಿಕಾರಿಗಳಾಗಿ ನಿಯೋಜಿತರಾಗಿದ್ದರು. ಎಸ್‌ಐಆರ್ ವೇಳಾಪಟ್ಟಿಯ ಪ್ರಕಾರ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ಪ್ರಕ್ರಿಯೆಯೂ ಸೆಪ್ಟೆಂಬರ್-ಅಕ್ಟೋಬರ್ ಅವಧಿಯವರೆಗೆ ಮುಂದುವರಿದಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಶಾಲೆಯಿಂದ ಹೊರಗಿದ್ದು, ತರಗತಿ ಬೋಧನೆಗೆ ಹೊಡೆತ ಬೀಳುತ್ತಿದೆ ಎಂಬ ಆತಂಕ ವ್ಯಕ್ತವಾಗಿತ್ತು.

ಜೂನ್‌ನಲ್ಲಿಯೇ ಶಿಕ್ಷಕರ ಬೋಧನಾ ಸಮಯ ಕಡಿಮೆಯಾಗುತ್ತಿರುವ ಬಗ್ಗೆ ವರದಿಗಳು ಬಂದಿದ್ದವು. ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ ಕೆಲವೇ ಶಿಕ್ಷಕರನ್ನು ಬೋಧನೇತರ ಕೆಲಸಕ್ಕೆ ನಿಯೋಜಿಸಿದರೂ ಇಡೀ ವೇಳಾಪಟ್ಟಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಶಿಕ್ಷಣ ವಲಯದವರು ಹೇಳಿದ್ದರು.

ಕರಡು ಕಾಯ್ದೆಯಲ್ಲಿ ಏನಿದೆ? ಸರ್ಕಾರದ ಪ್ರಸ್ತಾವಿತ ವ್ಯವಸ್ಥೆಯ ಅತ್ಯಂತ ಪ್ರಮುಖ ಅಂಶವೆಂದರೆ ಬೋಧಕೇತರ ಸಾರ್ವಜನಿಕ ಕರ್ತವ್ಯ ನಿರ್ವಹಣಾ ಪಟ್ಟಿ ರಚಿಸುವುದು. ರಾಜ್ಯದ



ವಿವಿಧ ಇಲಾಖೆಗಳು, ಶಾಸನಬದ್ಧ ಮಂಡಳಿಗಳು, ನಿಗಮಗಳು, ಸಾರ್ವಜನಿಕ ವಲಯದ ಸಂಸ್ಥೆಗಳು, ನಿವೃತ್ತ ಸರ್ಕಾರಿ ನೌಕರರು ಹಾಗೂ ತರಬೇತಿ ಪಡೆದ ಸ್ವಯಂಸೇವಕರ ಜಿಲ್ಲಾವಾರು ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶವಿದೆ. ಶಿಕ್ಷಕರನ್ನು ನಿಯೋಜಿಸುವ ಮೊದಲು ಈ ಲಭ್ಯವಿರುವ ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಬೇಕಾಗುತ್ತದೆ.

ಅಂದರೆ, ಮೊದಲ ಆಯ್ಕೆ ಬೋಧಕೇತರ ಸಿಬ್ಬಂದಿ; ಶಿಕ್ಷಕರು ಕೊನೆಯ ಆಯ್ಕೆ ಎಂಬ ವ್ಯವಸ್ಥೆ ರೂಪಿಸುವುದು ಸರ್ಕಾರದ ಉದ್ದೇಶವಾಗಿದೆ.

ಡಿಸಿ ಪ್ರಮಾಣಪತ್ರ ಕಡ್ಡಾಯ: ಬೋಧಕೇತರ ಕರ್ತವ್ಯಕ್ಕೆ ಶಿಕ್ಷಕರನ್ನು ನಿಯೋಜಿಸುವ ಮುನ್ನ ಸಂಬಂಧಪಟ್ಟ ಜಿಲ್ಲಾಧಿಕಾರಿಯಿಂದ ಲಭ್ಯವಿಲ್ಲದ ಪ್ರಮಾಣಪತ್ರ ಪಡೆಯುವುದು ಕಡ್ಡಾಯಗೊಳಿಸುವ ಪ್ರಸ್ತಾವನೆ ಇದೆ. ಜಿಲ್ಲೆಯಲ್ಲಿ ಬೋಧಕೇತರ ಸಿಬ್ಬಂದಿ ಅಥವಾ ಪರ್ಯಾಯ ಮಾನವ ಸಂಪನ್ಮೂಲ ಲಭ್ಯವಿಲ್ಲ ಎಂಬುದನ್ನು ಜಿಲ್ಲಾಧಿಕಾರಿ ದೃಢಪಡಿಸಿದ ನಂತರವೇ ಶಿಕ್ಷಕರ ನಿಯೋಜನೆಗೆ ಮುಂದಾಗಬಹುದು. ಈ ಮೂಲಕ ಯಾವುದೇ ಇಲಾಖೆಯು ತನ್ನ ಅನುಕೂಲಕ್ಕಾಗಿ ನೇರವಾಗಿ ಶಾಲಾ ಶಿಕ್ಷಕರನ್ನು ಕರ್ತವ್ಯಕ್ಕೆ ಕರೆಸಿಕೊಳ್ಳುವುದನ್ನು ನಿಯಂತ್ರಿಸುವ ಉದ್ದೇಶ ಹೊಂದಲಾಗಿದೆ.

ಶಾಲೆ ಮುಚ್ಚುವಂತಿಲ್ಲ: ಪ್ರಸ್ತಾವಿತ ಕಾನೂನಿನಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ, ಶಿಕ್ಷಕರನ್ನು ಹೊರಗಿನ ಕರ್ತವ್ಯಕ್ಕೆ ಕಳುಹಿಸುವ ಕಾರಣಕ್ಕೆ ಶಾಲೆ ಅಥವಾ ತರಗತಿಯನ್ನು ಬೋಧಕರಿಲ್ಲದೆ ಬಿಡುವಂತಿಲ್ಲ. ಶಾಲಾ ಅವಧಿಯಲ್ಲಿ ಕನಿಷ್ಠ ಒಬ್ಬ ಖಾಯಂ ಶಿಕ್ಷಕರಾದರೂ ಶಾಲೆಯಲ್ಲಿ ಹಾಜರಿರಬೇಕು.

ನಿಗದಿತ ವಿದ್ಯಾರ್ಥಿ-ಶಿಕ್ಷಕ ಅನುಪಾತವೂ ಕಡ್ಡಾಯವಾಗಿ ಕಾಪಾಡಬೇಕಾಗುತ್ತದೆ. ಇದರಿಂದ ವಿಶೇಷವಾಗಿ ಒಬ್ಬ ಅಥವಾ ಇಬ್ಬರು ಶಿಕ್ಷಕರಿರುವ ಗ್ರಾಮೀಣ ಶಾಲೆಗಳಲ್ಲಿ ಸಂಪೂರ್ಣ ಸಿಬ್ಬಂದಿಯನ್ನು ಹೊರಗಿನ ಕೆಲಸಕ್ಕೆ ಕಳುಹಿಸುವ ಪರಿಸ್ಥಿತಿಗೆ ಕಡಿವಾಣ ಬೀಳಲಿದೆ. ಈ ಹಿಂದೆ ಶಿಕ್ಷಣ ಇಲಾಖೆ ಪರಿಗಣಿಸಿದ್ದ ಮಾರ್ಗಸೂಚಿಗಳಲ್ಲಿಯೂ ಏಕಶಿಕ್ಷಕ ಶಾಲೆಗಳನ್ನು ಇಂತಹ ಕರ್ತವ್ಯಗಳಿಗೆ ಬಳಸಬಾರದು, ಇಬ್ಬರು ಶಿಕ್ಷಕರಿರುವ ಶಾಲೆಯಲ್ಲಿ ಒಬ್ಬರನ್ನಷ್ಟೇ ನಿಯೋಜಿಸಬೇಕು ಹಾಗೂ ಅಗತ್ಯ ಸಿಬ್ಬಂದಿ ಇರುವ ಪ್ರಾಥಮಿಕ ಶಾಲೆಗಳಲ್ಲಿ ನಿಯೋಜನೆಯನ್ನು ಮಿತಿಗೊಳಿಸಬೇಕು ಎಂಬ ಚಿಂತನೆ ವ್ಯಕ್ತವಾಗಿತ್ತು. ಕರ್ತವ್ಯಕ್ಕೆ ನಿಯೋಜಿಸಲಾದ ಶಿಕ್ಷಕರಿಗೆ ನೀಡುವ ತರಬೇತಿಯನ್ನೂ ಬೋಧನಾ ಅವಧಿಯ ಹೊರಗೆ ನಡೆಸಬೇಕೆಂಬ ನಿಯಮ ಕರಡಿನಲ್ಲಿ ಪ್ರಸ್ತಾಪಿಸಲಾಗಿದೆ.

ಅಂದರೆ, ಶಿಕ್ಷಕರನ್ನು ಹೊರಗಿನ ಕೆಲಸಕ್ಕೆ ಕಳುಹಿಸಿ, ಅದರ ತರಬೇತಿಯ ಹೆಸರಿನಲ್ಲಿ ಮತ್ತಷ್ಟು ತರಗತಿ ಸಮಯ ಕಳೆದುಕೊಳ್ಳುವ ಪರಿಸ್ಥಿತಿ ತಪ್ಪಿಸುವ ಪ್ರಯತ್ನ ಇದಾಗಿದೆ. ಅದೇ ರೀತಿ, ಶಿಕ್ಷಕರ ಗೈರುಹಾಜರಿಯಿಂದ ಉಂಟಾದ ಬೋಧನಾ ನಷ್ಟವನ್ನು 30 ದಿನಗಳೊಳಗೆ ಸರಿದೂಗಿಸಬೇಕು ಎಂಬ ನಿಯಮವೂ ಪ್ರಸ್ತಾಪಿತವಾಗಿದೆ. ಕಡ್ಡಾಯ ನಿಯೋಜನೆಯ ಬದಲು, ಇಂತಹ ಕರ್ತವ್ಯ ನಿರ್ವಹಿಸಲು ಸಿದ್ಧರಾಗಿರುವ ಸ್ವಯಂಪ್ರೇರಿತ ಶಿಕ್ಷಕರಿಗೆ ಮೊದಲು ಅವಕಾಶ ನೀಡುವ ವ್ಯವಸ್ಥೆಯೂ ಕರಡು ಕಾಯ್ದೆಯಲ್ಲಿದೆ.

ಆದರೆ ಸ್ವಯಂಪ್ರೇರಿತವಾಗಿ ಶಿಕ್ಷಕರು ಲಭ್ಯವಿಲ್ಲದಿದ್ದರೆ ಮತ್ತು ಪರ್ಯಾಯ ಸಿಬ್ಬಂದಿಯೂ ಇಲ್ಲದಿದ್ದರೆ ಮಾತ್ರ ಮುಂದಿನ ಹಂತದಲ್ಲಿ ಕಡ್ಡಾಯ ನಿಯೋಜನೆಗೆ ಅವಕಾಶ ಕಲ್ಪಿಸುವ ಉದ್ದೇಶ ಕಾಣಿಸುತ್ತದೆ. ಕಾಯ್ದೆಯ ನಿಯಮಗಳಿಗೆ ವಿರುದ್ಧವಾಗಿ ಶಿಕ್ಷಕರನ್ನು ನಿಯೋಜಿಸಿದರೆ, ಅಂತಹ ಆದೇಶವನ್ನು ಪಾಲಿಸಲು ನಿರಾಕರಿಸಿದ ಶಿಕ್ಷಕ ಅಥವಾ ಶಾಲಾ ಮುಖ್ಯಸ್ಥರ ವಿರುದ್ಧ ಶಿಸ್ತು ಕ್ರಮ, ಸೇವಾ ದಾಖಲೆಯಲ್ಲಿ ಪ್ರತಿಕೂಲ ನಮೂದು ಅಥವಾ ವೇತನ ಕಡಿತದಂತಹ ಕ್ರಮ ಕೈಗೊಳ್ಳದಂತೆ ರಕ್ಷಣೆ ನೀಡುವ ಅಂಶವೂ ಕರಡಿನಲ್ಲಿ ಸೇರಿಸಲಾಗಿದೆ.

“ ಈ ಮೂಲಕ ಯಾವುದೇ ಇಲಾಖೆಯು ತನ್ನ ಅನುಕೂಲಕ್ಕಾಗಿ ನೇರವಾಗಿ ಶಾಲಾ ಶಿಕ್ಷಕರನ್ನು ಕರ್ತವ್ಯಕ್ಕೆ ಕರೆಸಿಕೊಳ್ಳುವುದನ್ನು ನಿಯಂತ್ರಿಸುವ ಉದ್ದೇಶ ಹೊಂದಲಾಗಿದೆ. ಶಾಲೆ ಮುಚ್ಚುವಂತಿಲ್ಲ: ಪ್ರಸ್ತಾವಿತ ಕಾನೂನಿನಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ, ಶಿಕ್ಷಕರನ್ನು ಹೊರಗಿನ ಕರ್ತವ್ಯಕ್ಕೆ ಕಳುಹಿಸುವ ಕಾರಣಕ್ಕೆ ಶಾಲೆ ಅಥವಾ ತರಗತಿಯನ್ನು ಬೋಧಕರಿಲ್ಲದೆ ಬಿಡುವಂತಿಲ್ಲ. ಶಾಲಾ ಅವಧಿಯಲ್ಲಿ ಕನಿಷ್ಠ ಒಬ್ಬ ಖಾಯಂ ಶಿಕ್ಷಕರಾದರೂ ಶಾಲೆಯಲ್ಲಿ ಹಾಜರಿರಬೇಕು. ನಿಗದಿತ ವಿದ್ಯಾರ್ಥಿ- ಶಿಕ್ಷಕ ಅನುಪಾತವೂ ಕಡ್ಡಾಯವಾಗಿ ಕಾಪಾಡಬೇಕಾಗುತ್ತದೆ. ಇದರಿಂದ ವಿಶೇಷವಾಗಿ ಒಬ್ಬ ಅಥವಾ ಇಬ್ಬರು ಶಿಕ್ಷಕರಿರುವ ಗ್ರಾಮೀಣ ಶಾಲೆಗಳಲ್ಲಿ ಸಂಪೂರ್ಣ ಸಿಬ್ಬಂದಿಯನ್ನು ಹೊರಗಿನ ಕೆಲಸಕ್ಕೆ ಕಳುಹಿಸುವ ಪರಿಸ್ಥಿತಿಗೆ ಕಡಿವಾಣ ಬೀಳಲಿದೆ.

## ಬೇರೊಂದು ಹುಲಿಯೊಂದಿಗೆ ಕಾದಾಡಿ ಪ್ರಾಣಬಿಟ್ಟ ಹೆಣ್ಣು ಹುಲಿ

ಅ.ಶ. ಸುದ್ದಿ ನಂಜನಗೂಡು

**ನಂಜನಗೂಡು: ತಾಲೂಕಿನ ಘಟ್ಟವಾಡಿ ಗ್ರಾಮದಲ್ಲಿ ಎರಡು ವರ್ಷದ ಹೆಣ್ಣು ಹುಲಿಯ ಕಳೇಬರ ಪತ್ತೆಯಾಗಿದ್ದು, ಬೇರೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ. ಘಟ್ಟವಾಡಿ ಗ್ರಾಮದ ಸರ್ವೇ ನಂ. 286ರ ಸರ್ಕಾರಿ ಕೆರೆ ಸಮೀಪದ ಮುಳ್ಳು ಪೊದೆಯಲ್ಲಿ ಸುಮಾರು ಎರಡು ವರ್ಷದ ಹೆಣ್ಣು ಹುಲಿಯ ಮೃತದೇಹ ಪತ್ತೆಯಾಗಿದೆ. ಇದರಿಂದ ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ.**



ವಿಷಯ ತಿಳಿದು ವಲಯ ಅರಣ್ಯಾಧಿಕಾರಿ ನಿತಿನ್ ಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಹುಲಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮೈಸೂರಿಗೆ ರವಾನಿಸಲಾಯಿತು. ವಲಯ ಅರಣ್ಯಾಧಿಕಾರಿ ನಿತಿನ್ ಕುಮಾರ್ ಮಾತನಾಡಿ, ಹುಲಿಯ ಮೃತದೇಹದ ಮೇಲೆ ಗಾಯದ ಗುರುತುಗಳು ಕಂಡುಬಂದಿವೆ. ಮೇಲ್ನೋಟಕ್ಕೆ ಎರಡು ಹುಲಿಗಳ ನಡುವೆ ಕಾದಾಟ ನಡೆದು ಸಾವನ್ನಪ್ಪಿರಬಹುದು ಎಂಬ ಶಂಕೆ ಇದೆ. ಮರಣೋತ್ತರ ಪರೀಕ್ಷೆಯ ಬಳಿಕವಷ್ಟೇ ವಾಸ್ತವಾಂಶ ತಿಳಿಯಲಿದೆ. ಘಟನೆಯ ಬಗ್ಗೆ ಇಲಾಖೆಯ ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದರು. ಸ್ಥಳಕ್ಕೆ ಡಿಎಫ್‌ಒ ಸಿ. ಪರಮೇಶ್, ಎಫ್‌ಒ ರವಿಶಂಕರ್, ವಲಯ ಅರಣ್ಯಾಧಿಕಾರಿ ನಿತಿನ್ ಸೇರಿದಂತೆ ಅರಣ್ಯ ಇಲಾಖೆಯ ಸಿಬ್ಬಂದಿ ಹಾಗೂ ವೈದ್ಯರು ಭೇಟಿ ನೀಡಿದ್ದರು.

## ಮತದಾರರ ಪಟ್ಟಿಗಳ ಸಮಗ್ರ ಪರಿಷ್ಕರಣೆ-2026 ಅಂಗವಾಗಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ




ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಸೆಪ್ಟೆಂಬರ್ 19 ಮತ್ತು 20 ರಂದು ಜಿಲ್ಲೆಯಾದ್ಯಂತ ಹಮ್ಮಿಕೊಂಡಿದ್ದ ಮತದಾರರ ಮಿಂಚಿನ ನೋಂದಣಿ ಅಭಿಯಾನವೂ ಸೇರಿದಂತೆ ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಇದುವರೆಗೆ 11,464 ಹೊಸ ಅರ್ಜಿಗಳು ಸ್ವೀಕೃತವಾಗಿವೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ.ಇಟ್ನಾಳ ಅವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತಿಳಿಸಿದರು.**

ಬುಧವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿಗಳ ಸಮಗ್ರ ಪರಿಷ್ಕರಣೆ-2026 ಅಂಗವಾಗಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸೆ.23ರಂದು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದ್ದು, ಒಟ್ಟು 10,41,388 ಮತದಾರರನ್ನು ದಾಖಲಿಸಲಾಗಿದೆ. ಇದರಲ್ಲಿ 5,19,142 ಪುರುಷ ಮತದಾರರು, 5,22,189 ಮಹಿಳಾ ಮತದಾರರು ಹಾಗೂ 57 ಇತರ ಮತದಾರರು ಸೇರಿದ್ದಾರೆ.

ಪ್ರಸ್ತುತ ಪಟ್ಟಿಯಲ್ಲಿ 3,281 ಮತದಾರರ ಮಾಹಿತಿ ಮ್ಯಾಪ್ ಆಗಿಲ್ಲ ಹಾಗೂ 11,120 ಮತದಾರರ ಹೆಸರುಗಳಲ್ಲಿ ವ್ಯತ್ಯಾಸಗಳು ಕಂಡುಬಂದಿವೆ. ಇಂತಹ ಲೋಪದೋಷಗಳನ್ನು ಸರಿಪಡಿಸಲು ಇದುವರೆಗೆ 14,401 ನೋಟಿಸ್‌ಗಳನ್ನು ಜನರೇಟ್ ಮಾಡಲಾಗಿದ್ದು, 14,401 ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದೆ. ಇನ್ನು 1 ನೋಟಿಸ್ ಜಾರಿಯಾಗಬೇಕಿದೆ. ನೊಟೀಸ್ ನೀಡಿದ ಪೈಕಿ ಈಗಾಗಲೇ 10,449 ಮತದಾರರ ವಿಚಾರಣೆ ಪೂರ್ಣಗೊಂಡಿದೆ ಎಂದು ಅವರು ಮಾಹಿತಿ ನೀಡಿದರು.

ನೋಟಿಸ್ ನೀಡಿದ ಮತದಾರರಲ್ಲಿ ಹಿರಿಯ ನಾಗರಿಕರು, ವಿಕಲಾಂಗರು (ವಿಶೇಷ ಚೇತನರು) ಹಾಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಅಧಿಕಾರಿಗಳೇ ಖುದ್ದಾಗಿ ಅವರ ಮನೆ ಹಾಗೂ ಆಸ್ಪತ್ರೆಗಳಿಗೆ ತೆರಳಿ ದಾಖಲೆಗಳನ್ನು ಪರಿಶೀಲಿಸಿ ವಿಚಾರಣೆ ನಡೆಸುತ್ತಿದ್ದಾರೆ. ವಿಚಾರಣೆ ಪೂರ್ಣಗೊಂಡ ಪ್ರಕರಣಗಳಲ್ಲಿ ಜನರನ್ನು ಅಂತಿಮ ಮತದಾರರ ಪಟ್ಟಿಗೆ ಸೇರಿಸಲು ನಿರ್ಧರಿಸಲಾಗಿದೆ. ಉಳಿದಂತೆ ಲ್ಯಾಪ್ಸ್ ಆಗಿರುವ ಪ್ರಕರಣಗಳ ವಿಚಾರಣೆ ಸಮಯ ಮರುನಿಗದಿಯಾಗಿದೆ.

ಇದುವರೆಗೆ 11,464 ಹೊಸ ಅರ್ಜಿಗಳು (ನಮೂನೆ 6) ಸಲ್ಲಿಕೆಯಾಗಿದ್ದು, ಅವುಗಳ ಪರಿಶೀಲನೆ ಕೂಡ ನಡೆಯುತ್ತಿದೆ. ನಮೂನೆ 6ಎಗೆ ಒಂದು ಅರ್ಜಿ, ನಮೂನೆ 7ರಲ್ಲಿ 1,226 ಅರ್ಜಿಗಳು ಹಾಗೂ ತಿದ್ದುಪಡಿಗಾಗಿ ನಮೂನೆ 8 ರಲ್ಲಿ 14,783 ಅರ್ಜಿಗಳು ಸ್ವೀಕೃತವಾಗಿವೆ ಎಂದು ಅವರು ತಿಳಿಸಿದರು. ಸಭೆಯಲ್ಲಿ ಚುನಾವಣಾ ತಹಶೀಲ್ದಾರ ರವಿಕುಮಾರ ವಸ್ತ್ರದ, ಚುನಾವಣಾ ಶಾಖೆಯ ನಾಗರಾಜ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಕೃಷ್ಣಪ್ಪ ಎಂ.ಇಟ್ಟಂಗಿ, ಬಿಜೆಪಿ ಪಕ್ಷದ ರಾಜು ಬಾಕಳೆ, ಬಿ.ಎಸ್.ಪಿ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಸ್. ಮೈಲಾರಪ್ಪ, ರವಿ ಹಿರೇಮನಿ ಸೇರಿದಂತೆ ಚುನಾವಣಾ ಶಾಖೆಯ ಇತರೆ ಸಿಬ್ಬಂದಿ ಉಪಸ್ಥಿತರಿದ್ದರು.

## ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು ಇವರ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವನ್ನು ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಚಾಲನೆ ನೀಡಲಾಯಿತು.**




ಈ ಕಾರ್ಯಕ್ರಮದಲ್ಲಿ ಜಾವೇದ್ ಜಮಾದಾರ್ ಮಾತನಾಡಿ, ಜಿಲ್ಲೆಯ 13 ತಾಲ್ಲೂಕುಗಳಲ್ಲಿ ನಡೆದ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ಮಾಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವ ಕ್ರೀಡಾಪಟುಗಳು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಕ್ರೀಡೆಯಲ್ಲಿ ಅನ್ನಷ್ಟು ಉತ್ತಮ ಸಾಧನೆ ಮಾಡುವ ಮೂಲಕ ಜಿಲ್ಲೆ ಹಾಗೂ ರಾಜ್ಯಕ್ಕೆ ಹೆಸರು ತರಬೇಕು ಎಂದು ಹೇಳಿದರು. .ನಾಗರಾಜ ಲಂಬು ಅವರು ಮಾತನಾಡಿ, ಜೀವನದಲ್ಲಿ ಕಲಿಕೆಗೆ ನೀಡುವಷ್ಟೇ ಮಹತ್ವವನ್ನು ಕ್ರೀಡೆಗೂ ನೀಡಿ ಸದಾ ಕ್ರಿಯಾ ಶೀಲರಾಗಿರಲು ವ್ಯಾಯಾಮ, ಯೋಗ ಹಾಗೂ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ ಎಂದರು. ಕ್ರೀಡೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸುಧಾರಿಸುವುದರ ಜೊತೆಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ಕ್ರೀಡೆಗೆ ಹೆಚ್ಚಿನ ಒತ್ತು ನೀಡಿ, ಮುಂದಿನ ದಿನಗಳಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಹೆಸರು ಗಳಿಸಬೇಕು ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಬೋವಿ ಮಾತನಾಡಿ, ಕ್ರೀಡೆಯಲ್ಲಿ ಸೋಲು-ಗೆಲುವು ಮುಖ್ಯವಲ್ಲ, ಕ್ರೀಡಾ ಸ್ಫೂರ್ತಿಯಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವುದು ಮುಖ್ಯ ಎಂದು ಅವರು ಕ್ರೀಡಾಪಗಳಿಗೆ ಕರೆ ನೀಡಿದರು.

659ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆ ಹಾಗೂ ಸಾಮರ್ಥ್ಯವನ್ನು ಪ್ರದರ್ಶಿಸಲು ಕ್ರೀಡೆ ಉತ್ತಮ ವೇದಿಕೆಯಾಗಿದೆ. ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ಉತ್ತಮ ಮನೋಭಾವ, ತಾಳ್ಮೆ, ಶಿಸ್ತು ಹಾಗೂ ಅತ್ಮವಿಶ್ವಾಸ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ ಸವಿಕುಮಾರ, ಹನುಮಂತ ರಾಮಪುರ, ರವಿಕುಮಾರ ವಾಲಿ, ತ್ರಿಯಾಂಕಾ, ದೈಹಿಕ ಶಿಕ್ಷಣ ಶಿಕ್ಷಕರು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ರಾಜೀನಾಮೆಗಿಂತ ರೈತರ ಬದುಕು ದೊಡ್ಡದು: ಬಿ.ಡಿ. ಪಾಟೀಲ

ಅ.ಶ. ಸುದ್ದಿ ಇಂಡಿ

**ಇಂಡಿ: ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕನ್ನು ಬರಪೀಡಿತ ತಾಲೂಕುಗಳ ಪಟ್ಟಿಗೆ ಸೇರ್ಪಡೆ ಮಾಡಬೇಕು ಎಂದು ಆಗ್ರಹಿಸಿ ರೈತರು ಹಾಗೂ ವಿವಿಧ ಸಂಘಟನೆಗಳು ಹಲವು ಬಾರಿ ಹೋರಾಟ ನಡೆಸಿದ್ದರೂ, ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಇಂಡಿ ತಾಲೂಕು ಸೇರ್ಪಡೆಯಾಗದಿರುವುದು ದುರದೃಷ್ಟಕರ ಎಂದು ಜೆಡಿಎಸ್ ಮುಖಂಡ ಬಿ.ಡಿ. ಪಾಟೀಲ ಆಕ್ರೋಶ ವ್ಯಕ್ತಪಡಿಸಿದರು.**



ಇಂಡಿ ತಾಲೂಕಿನಲ್ಲಿ ಬರದ ಪರಿಸ್ಥಿತಿ ತೀವ್ರವಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಬೇಕಾಗಿದೆ. ಆದರೆ ಇಂಡಿ ತಾಲೂಕನ್ನು ಬರಪೀಡಿತ ಪಟ್ಟಿಯಿಂದ ಕೈಬಿಟ್ಟಿರುವುದು ರೈತರಲ್ಲಿ ತೀವ್ರ ನಿರಾಸೆ ಮೂಡಿಸಿದೆ ಎಂದು ಅವರು ಹೇಳಿದರು. ಸ್ಥಳೀಯ ಶಾಸಕ ಯಶವಂತರಾಯಗೌಡ ಪಾಟೀಲರು ರೈತರ ಸಮಸ್ಯೆಗಳ ಕುರಿತು ಸರ್ಕಾರದ ಗಮನ ಸೆಳೆದು, ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಪರಿಣಾಮಕಾರಿ ಪ್ರಯತ್ನ ಮಾಡಬೇಕಿತ್ತು.

ಆದರೆ ಇದೀಗ ರಾಜೀನಾಮೆ ನೀಡುವ ಮಾತುಗಳ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನ ನಡೆಯುತ್ತಿದೆ ಎಂಬುದು ಜನರಲ್ಲಿ ಚರ್ಚೆಯಾಗುತ್ತಿದೆ ಎಂದು ಬಿ.ಡಿ. ಪಾಟೀಲ ಆರೋಪಿಸಿದರು. ."ರಾಜೀನಾಮೆ ದೊಡ್ಡದಲ್ಲ, ರೈತರ ಬದುಕು ದೊಡ್ಡದು. ಸದ್ಯ ರಾಜೀನಾಮೆ ಸಲ್ಲಿಸುವ ಪರಿಸ್ಥಿತಿ ಇಲ್ಲ; ಏನಾದರೂ ಇದ್ದರೆ ರೈತರು ತಮ್ಮ ಬದುಕನ್ನೇ ಕಳೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಈ ಗಂಭೀರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತಕ್ಷಣ ರೈತರ ನೆರವಿಗೆ ಧಾವಿಸಬೇಕು," ಎಂದು ಅವರು ಒತ್ತಾಯಿಸಿದರು. ಇಂಡಿ ತಾಲೂಕನ್ನು ತಕ್ಷಣ ಬರಪೀಡಿತ ಪಟ್ಟಿಗೆ ಸೇರ್ಪಡೆಗೊಳಿಸಿ, ರೈತರಿಗೆ ಬರ ಪರಿಹಾರ, ಬೆಳೆ ನಷ್ಟ ಪರಿಹಾರ, ಬೆಳೆ ವಿಮೆ ಹಾಗೂ ಅಗತ್ಯ ನೆರವು ಒದಗಿಸಬೇಕು. ರೈತರ ಸಂಕಷ್ಟಕ್ಕೆ ಸ್ಪಂದಿಸುವಲ್ಲಿ ಸರ್ಕಾರ ವಿಳಂಬ ಮಾಡಬಾರದು ಎಂದು ಬಿ.ಡಿ. ಪಾಟೀಲ ಆಗ್ರಹಿಸಿದರು.

# ಎಸ್.ಐ.ಆರ್ ಪ್ರಕ್ರಿಯೆ ರದ್ದಾಗುವವರೆಗೂ ಮತ್ತು ಜ್ಞಾನೇಶ್ ಕುಮಾರ್ ರಾಜೀನಾಮೆ ಆಗುವವರೆಗೂ ಹೋರಾಟ: ಪ್ರಕಾಶ್ ರಾಜ್

ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ಈ ದೇಶದಲ್ಲಿ ಬಡವನು ಶ್ರೀಮಂತನು ಅಕ್ಷರಸ್ಥನೋ ಅನಕ್ಷರಸ್ಥನೋ ವೋಟು ಹಕ್ಕು ಎಲ್ಲರಿಗೆ ಸಮಾನ ಆದರೆ ಎಸ್‌ಐಆರ್ ಹೆಸರಲ್ಲಿ ಕೇಂದ್ರ ಸರ್ಕಾರ ಮತದಾನ ಹಕ್ಕು ಕಸಿಯುತ್ತಿರುವುದು ಖಂಡನಾರ್ಹ ಎಂದು ಬಹುಭಾಷಾ ನಟ ಮತ್ತು ಸಾಮಾಜಿಕ ಹೋರಾಟಗಾರ ಪ್ರಕಾಶ್ ರಾಜ್ ಅವರು ಹೇಳಿದರು, ಪ್ರಕಾಶ್ ರಾಜ್ ನೇತೃತ್ವದಲ್ಲಿ ಕರ್ನಾಟಕದಲ್ಲಿ ಎಸ್‌ಐಆರ್ ಪರಿಶೋಧ ಹಾಗೂ ಪ್ರತಿರೋಧ ಪ್ರವಾಸ ಎಂಬ ರಾಜ್ಯಮಟ್ಟದ ವಿನೂತನ ಅಭಿಯಾನ ಭಾಗವಾಗಿ ಸೆಪ್ಟೆಂಬರ್ 24 ರಂದು ಕೊಪ್ಪಳದಲ್ಲಿ ಹಮ್ಮಿಕೊಂಡ ಬೃಹತ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳುವ ಸಂದರ್ಭದಲ್ಲಿ ಮಾರ್ಗಮಧ್ಯೆ ಕಾರಟಗಿಯ ಕನಕದಾಸ ವೃತ್ತದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.**

ಕರ್ನಾಟಕದಲ್ಲಿ 01ಕೋಟಿ 08 ಲಕ್ಷ ಜನರನ್ನು ಮತದಾನ ಪಟ್ಟಿಯಿಂದ ತೆಗೆಯಲಾಗಿದೆ 43 ಲಕ್ಷ ಜನ ಮತದಾರರನ್ನು ಮ್ಯಾಪಿಂಗ್ ಮ್ಯಾಚ್ ಆಗಿಲ್ಲವೆಂದು ತೆಗೆಯಲಾಗಿದೆ ಒಟ್ಟಾರೆ ಅಂದಾಜು ಒಂದೂವರೆ ಕೋಟಿ ಮತದಾರರನ್ನು ಎಸ್‌ಐಆರ್ ಹೆಸರಲ್ಲಿ




ಮತದಾನ ಹಕ್ಕು ತೆಗೆದಿದ್ದಾರೆ, ಬೆಂಗಾಳದಲ್ಲಿ 38 ಲಕ್ಷ ಮತದಾರರನ್ನು ಡಿಲೀಟ್ ಮಾಡಲಾಗಿದೆ ಎಂದು ಎಸ್‌ಐಆರ್ ಲೋಪ ಕುರಿತು ಕೇಂದ್ರ ಸರ್ಕಾರವನ್ನು ಟೀಕಿಸಿದರು.ಮುಂದುವರೆದು ಮಾತನಾಡಿದ ಅವರು ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ನಡೆದಿರುವ ಲೋಪದೋಷಗಳನ್ನು ಖಂಡಿಸಿ ಮತ್ತು ಅರ್ಹ ಮತದಾರರ ಹಕ್ಕುಗಳನ್ನು ರಕ್ಷಿಸುವ ಉದ್ದೇಶದಿಂದ ಈ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದೆ.

ಎಸ್‌ಐಆರ್ ಪ್ರಕ್ರಿಯೆಯ ಕಾರಣದಿಂದಾಗಿ ಅನೇಕ ನೈಜ ಮತ್ತು ಬಡ ನಾಗರಿಕರ ಹೆಸರುಗಳು ಮತದಾರರ ಪಟ್ಟಿಯಿಂದ ಕೈಬಿಟ್ಟು ಹೋಗುತ್ತಿವೆ.ವಿಐಪಿ ಅಥವಾ ಗಣ್ಯರ ಹೆಸರುಗಳನ್ನು ಕೆಲವೇ ಗಂಟೆಗಳಲ್ಲಿ ಮರು ಸೇರ್ಪಡೆ ಮಾಡಲಾಗುತ್ತದೆ, ಆದ-'ರೆ ಸಾಮಾನ್ಯ ಹಾಗೂ ಬಡ ಮತದಾರರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಕರ್ನಾಟಕದಾದ್ಯಂತ ಸುಮಾರು 100 ಆಯ್ದ ಮತಗಟ್ಟೆಗಳಿಗೆ ಭೇಟಿ ನೀಡಿ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಆಗಿರುವ ಲೋಪದೋಷಗಳ ಬಗ್ಗೆ ಸಾಮಾಜಿಕ ಪರಿಶೋಧನೆ ನಡೆಸುವುದು ಈ ಪ್ರವಾಸದ ಪ್ರಮುಖ ಗುರಿಯಾಗಿದೆ. ಮತದಾನದ ಹಕ್ಕಿನಿಂದ ವಂಚಿತರಾಗಿರುವ ಸಂತ್ರಸ್ತ ಮತದಾರ-ರಿಂದ ಅಗತ್ಯ ದಾಖಲೆಗಳು ಹಾಗೂ ಮಾಹಿತಿಯನ್ನು ಈ ಪ್ರವಾಸದ ಸಂದರ್ಭದಲ್ಲಿ ಕಲೆಹಾಕಲಾಗುತ್ತಿದೆ. ಪ್ರವಾಸದ ಮೂಲಕ ಸಂಗ್ರಹಿಸಿದ ಲೋಪದೋಷಗಳ ವರದಿಯನ್ನು ಹಿಡಿದು ಸೆಪ್ಟೆಂಬರ್ 30ರಂದು ಕರ್ನಾಟಕದ ಮುಖ್ಯಮಂತ್ರಿಗಳು ಹಾಗೂ ಸಚಿವರನ್ನು ಭೇಟಿ ಮಾಡಿ ಮನವರಿಕೆ ಮಾಡಲು ನಿರ್ಧರಿಸಿಲಾಗಿದೆ

ಎಸ್‌ಐಆರ್ ಸಮಸ್ಯೆಯನ್ನು ರಾಷ್ಟ್ರಮಟ್ಟದ ಗಮನಕ್ಕೆ ತರಲು ಅಕ್ಟೋಬರ್ 1ರಂದು ದೇಶದ ರಾಜಧಾನಿ ದೆಹಲಿಯಲ್ಲಿ ಸಭೆ ಹಾಗೂ ಹೋರಾಟ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ರಾಜೀನಾಮೆ ಆಗುವವರೆಗೂ ಎಸ್ ಐ ಆರ್ ಪ್ರಕ್ರಿಯೆ ರದ್ದಾಗುವವರೆಗೂ ಹೋರಾಟ ನಡೆಸಲಾಗುತ್ತದೆ ಹಾಗೂ ಕರಡು ಮತದಾರರ ಪಟ್ಟಿಯಲ್ಲಿ ತಿದ್ದುಪಡಿ ತರುವವರೆಗೂ ಹೋರಾಟ ಮುಂದುವ-ರಿಸುವುದಾಗಿ ಅವರು ತಿಳಿಸಿದರುಈ ಸಂದರ್ಭದಲ್ಲಿ ಜಾತ್ಯತೀತ, ಪ್ರಗತಿಪರ ವಿವಿಧ ಸಂಘಟನೆಗಳ ಮುಖಂಡರು, ಸಚಿವರಾದ ಶಿವರಾಜ್ ತಂಗಡಗಿ ಅವರ ಪುತ್ರ ಶಶಾಂಕ್ ತಂಗಡಗಿ ಬ್ಲಾಕ್ ಅಧ್ಯಕ್ಷರಾದ ಶರಣೇಗೌಡ ಮಾಲಿ ಪಾಟೀಲ್, ಹಿರಿಯ ಮುಖಂಡರಾದ ಶಿವಾರೆಡ್ಡಿ ನಾಯಕ್ ನಾಗರಾಜ್ ಅರಳಿ ಪ್ರದೀಪ್ ಹಿರೇಮಠ, ಸಿದ್ದಲಿಂಗ ಬಪ್ಪೂರು, ಹಾಗೂ ಕಾರ್ಯಕರ್ತರು ಇದ್ದರು

## ರೌಡಿಗಳೊಂದಿಗೆ ಎಣ್ಣೆ ಪಾರ್ಟಿ ಮಾಡಿದ ಎಎಸ್‌ಐ ಅಮಾನತು

ಅ.ಶ. ಸುದ್ದಿ ಚಿಕ್ಕಮಗಳೂರು

**ಚಿಕ್ಕಮಗಳೂರು: ರೌಡಿ ಶೀಟರ್‌ಗಳ ಜೊತೆ ಸೇರಿ ಮದ್ಯಪಾನ ಕೂಟ ಆಯೋಜಿಸಿದ್ದ ಹಿನ್ನಲೆಯಲ್ಲಿ ಕಡೂರು ತಾಲೂಕಿನ ಸಖರಾಯಪಟ್ಟಣ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ ವೀರೇಂದ್ರ ನನ್ನು ಅಮಾನತು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಆದ-ೇಶ ಹೊರಡಿಸಿದ್ದಾರೆ. ಘಟನೆಯ ವಿವರ: ಸುಮಾರು ಒಂದು ವಾರದ ಹಿಂದೆ ಕಡೂರು ತಾಲೂಕಿನ ಎಮೆದೊಡ್ಡಿ ಸಮೀಪದ ಮುಸ್ಲಾಪುರ ಗ್ರಾಮದ ಬಾರ್‌ವೊಂದರಲ್ಲಿ ಎಎಸ್‌ಐ ವೀರೇಂದ್ರ ರೌಡಿ ಶೀಟರ್‌ಗಳೊಂದಿಗೆ ಪಾರ್ಟಿ ಆಯೋಜಿಸಿದ್ದರು.**



ಅಷ್ಟೇ ಅಲ್ಲದೆ, ತಡರಾತ್ರಿಯವರೆಗೂ ದೊಡ್ಡ ಶಬ್ದದಲ್ಲಿ ಹಾಡುಗಳನ್ನು ಹಾಕಿಕೊಂಡು ಮೋಜು-ಮಸ್ತಿಯಲ್ಲಿ ತೊಡಗಿದ್ದರು. ಪೊಲಿಸ್ ಅಧಿಕಾರಿಯ ಈ ದುಂಡಾವರ್ತನೆಯಿಂದ ಆಕ್ರೋಶಗೊಂಡ ಸ್ಥಳೀಯ ಗ್ರಾಮಸ್ಥರು ಹಾಗೂ ನೂರಾರು ಮಹಿಳೆಯರು ತಡರಾತ್ರಿಯೇ ಬಾರ್ ಎದುರು ಧರಣಿ ಕುಳಿತರು. ನಿಗದಿತ ಸಮಯ ಮೀರಿದರೂ ತೆರೆದಿದ್ದ ಬಾರ್ ಅನ್ನು ತಕ್ಷಣವೇ ಬಂದ್ ಮಾಡಬೇಕೆಂದು ಪಟ್ಟು ಹಿಡಿದು ಭಾರಿ ಪ್ರತಿಭಟನೆ ನಡೆಸಿದರು. ಸಾರ್ವಜನಿಕರ ರಕ್ಷಣೆ ಮಾಡಬೇಕಾದ ಅಧಿಕಾರಿಯೇ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿರುವುದರ ವಿರುದ್ಧ ಸ್ಥಳೀಯರಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಜೊತೆಗೆ ಈ ಎಎಸ್‌ಐ ವಿರುದ್ಧ ನಿರಂತರವಾಗಿ ದೂರುಗಳು ಕೇಳಿಬರುತ್ತಿದ್ದವು. ಸಾರ್ವಜನಿಕರ ಭಾರಿ ಪ್ರತಿಭಟನೆ ಮತ್ತು ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ ಎಸ್ಪಿ ಜಿತೇಂದ್ರ ಕುಮಾರ್ ಎಎಸ್‌ಐ ವೀರೇಂದ್ರ ನನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದ್ದಾರೆ.

## 'ವಚನಾಮೃತ'

ಶ್ಯಾಣೆಯಿರದ ತರಳೆಯೊರ್ವಳ್
ಲಂಪಟರ ದಾಳದೊಳ್ ಬಿದ್ದು
ನಲುಗೊ ಪಾಡನೆಂತು ಬಲ್ಲೆಯ!
ಕಚ್ಚೆ ಜಾರಿಸ್ವವರಿಗೇನ್ಗೊತ್ತು ಹಲ್ಕಟ್ಟಿ
ಇರುಳುಣ್ಣುವ ನೋವ ಬುತ್ತಿಯ
ಬಣ್ಣಿಸಲೆಂತು ಸತ್ಯವಾಣಿ!!.



ವಾಣಿ ಭಂಡಾರಿ.

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 46ನೇ ವಾರ್ಷಿಕ ಮಹಾಸಭೆ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕನಕಗಿರಿ ಇದರ 46ನೇ ಸಾಲಿನ ವಾರ್ಷಿಕ ಮಹಾಸಭೆಯು ಸೆ, 24, 2026 ಗುರುವಾರದಂದು ಅತ್ಯಂತ ಯಶಸ್ವಿಯಾಗಿ ಜರುಗಿತು. ಸಂಘದ ಅಧ್ಯಕ್ಷರಾದ ಬಿ. ಕನಕಪ್ಪ ಚಲವಾದಿಯವರ ಅಧ್ಯಕ್ಷತೆಯಲ್ಲಿ ಈ ಮಹಾಸಭೆಯು ಜರುಗಿತು.**

ಸಂಘದ ಪ್ರಮುಖ ವಿವರಗಳು: ಈ ಸಹಕಾರ ಸಂಘವು ಕನಕಗಿರಿಯಲ್ಲಿ ನೋಂದಣಿ ಸಂಖ್ಯೆ: ಉ. ನೋಂ. ರಾ. ಸ. 8 ಆ. ಜ. ಎನ್. ಸ. 4967/12-3-1981 ರಂದು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದ್ದು, ದೀರ್ಘಕಾಲದಿಂದ ರೈತ ಪರ ಸೇವೆಗಳನ್ನು ಸಲ್ಲಿಸುತ್ತಾ ಬಂದಿದ್ದು, "ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ" ಎನ್ನುವ ಸಹಕಾರ ತತ್ವದಡಿಯಲ್ಲಿ ಈ ಸಂಘವು ಕಾರ್ಯನಿರ್ವಹಿಸುತ್ತಿದೆ. ಸಭೆಯಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿ, ರೈತರ ಕಲ್ಯಾಣಕ್ಕಾಗಿ ಕೈಗೊಳ್ಳಬೇಕಾದ ಮುಂದಿನ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚೆ ನಡೆಸಿದರು. ?ಸಭೆಯಲ್ಲಿ ಸ್ಥಳೀಯ ರೈತರು ಮತ್ತು ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕನಕಗರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 46ನೇ ವರ್ಷದ 2025-2026ನೇ ಸಾಲಿನ ವಾರ್ಷಿಕ ವರದಿಯ ಮಂಡನೆ.



ಪ್ರಸಕ್ತ ಸಾಲಿನಲ್ಲಿ ಸಂಘಕ್ಕೆ ಲಾಭವಾಗಿದ್ದು, ನಿವ್ವಳ ಲಾಭವು 10,60,466=50 ರೂ.ಗಳಷ್ಟಿದೆ. ಮುಂದಿನ ವರ್ಷದಲ್ಲಿ ಹೆಚ್ಚಿನ ಸಾಲ ವಿತರಣೆ ಮಾಡುವ ಉದ್ದೇಶವಿದ್ದು, ಸದಸ್ಯರು ಪಡೆದ ಲಾಭವನ್ನು ಕಾಲಮಿತಿಯಲ್ಲಿ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸುವಂತೆ ಸಹಕಾರ ಸಂಘದ ಅಧ್ಯಕ್ಷರಾದ ಬಿ. ಕನಕಪ್ಪ ಚಲುವಾದಿ ಕೋರಿದರು. ಈ ವಾರ್ಷಿಕ ವರದಿಯನ್ನು ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ವಿಜಯಕುಮಾರ ತೆಗ್ಗಿನಮನಿ ಹಾಗೂ ಅಧ್ಯಕ್ಷರಾದ ಬಿ. ಕನಕಪ್ಪ ಚಲುವಾದಿಯವರ ನೇತೃತ್ವದಲ್ಲಿ ಕಾರ್ಯಕಾರಿ ಮಂಡಳಿಯ ಪರವಾಗಿ ಮಂಡಿಸಿದ್ದು, ಸಹಕಾರ ಇಲಾಖೆ ಮತ್ತು ಆರ್.ಕೆ.ಡಿ.ಸಿ. ಬ್ಯಾಂಕ್ ರಾಯಚೂರು ಹಾಗೂ ಕನಕಗಿರಿ ಅಧಿಕಾರಿಗಳ ಸಹಕಾರವನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.

ಮುಂದಿನ ಸಾಲಿನ ಮುಂಗಡ ಪತ್ರ: ಸಂಘದ 2025-2026ರ ಲೆಕ್ಕ ಪತ್ರಗಳನ್ನು ಹಾಗೂ 2026-2027ನೇ ಸಾಲಿನ ಮುಂಗಡ ಪತ್ರವನ್ನು ಮಂಜೂರು ಮಾಡುವಂತೆ ಕೋರಲಾಯಿತು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕನಕಗಿರಿ ಇದರ 2025-2026ನೇ ಸಾಲಿನ ಆರ್ಥಿಕ ಹಾಗೂ ವಾರ್ಷಿಕ ಪ್ರಗತಿಯ ಪ್ರಮುಖ ವಿವರಗಳು : ಈ ಸಹಕಾರ ಸಂಘದ ಒಟ್ಟು ಷೇರು ಬಂಡವಾಳವು 77,60,831=00 ರೂ.ಗಳಷ್ಟಿದ್ದು, ವಿವಿಧ ನಿಧಿಗಳ ಒಟ್ಟು ಮೊತ್ತವು 47,27,547=03 ರೂ. ಗಳನ್ನು ಹೊಂದಿದೆ. ಸದಸ್ಯರ ವಿವಿಧ ಸಾಲಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಒಟ್ಟು 5,03,25,000=00 ರೂ.ಗಳ ವ್ಯವಹಾರವಿರುತ್ತದೆ.

ವ್ಯಾಪಾರ, ಲಾಭ ಮತ್ತು ಹಾನಿ: ಸಂಘದ ವ್ಯಾಪಾರ ಪತ್ರಿಕೆಯ ಪ್ರಕಾರ ಒಟ್ಟು ವ್ಯಾಪಾರ ಮೊತ್ತ 16,61,961=00 ರೂ.ಗಳಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸಂಘವು ಒಟ್ಟು 10,60,466=50 ರೂ. ಗಳ ನಿವ್ವಳ ಲಾಭವನ್ನು ಗಳಿಸಿದೆ. ಮುಂದಿನ ವರ್ಷದ ಯೋಜನೆ (2026-2027) : ಮುಂಬರುವ ಸಾಲಿನಲ್ಲಿ ಸದಸ್ಯರಿಗೆ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಾಲ ವಿತರಣೆ ಮಾಡಲು ಮತ್ತು ಸಂಘದ ಆರ್ಥಿಕ ಶಕ್ತಿಯನ್ನು ಮತ್ತಷ್ಟು ವಿಸ್ತ-ರಿಸಲು ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳಾದ ವಿಜಯಕುಮಾರ ತೆಗ್ಗಿಮನಿ (M.Com), ಹಾಗೂ ಉಪಾಧ್ಯಕ್ಷ ಮಹಾಂತೇಶ ಕೊಡ್ಲಿ ಸೇರಿದಂತೆ ಕಾರ್ಯಕಾರಿ ಮಂಡಳಿಯ ನಿರ್ದೇಶಕರಾದ ಶರಣಬಸಪ್ಪ ಕಲೀಕೇರಿ, ಕನಕರೆಡ್ಡಿ ಕೆರಿ, ರಾಘವೇಂದ್ರ ಚಿತ್ರಗಾರ, ಸಿಂಧುಬಲ್ಲಾಳ ಕುಂಬಾರ, ದುರುಗೇಶ ಗಂಗಾಮತ, ಅಮರೇಶ ಭಾವಿಕಟ್ಟಿ, ಸಣ್ಣ ರಾಮಣ್ಣ ಬ್ಯಾಳಿ, ಸಂಗಪ್ಪ ಹೂಗಾರ, ವನಜಾಕ್ಷಿ ಆಗೋಲಿ, ಶರಣಮ್ಮ ಸಜ್ಜನ, ಮತ್ತು ಸಿಬ್ಬಂದಿ ವರ್ಗದವರಾದ ಅಕೌಂಟೆಂಟ್ ಮಂಜುನಾಥ ರೆಡ್ಡಿ ಮಾದಿನಾಳ, ಕಂಪ್ಯೂಟರ್ ಆಪರೇಟರ್ ಸೆಕ್ಷಾವಲಿ ಬಿಳೆಕುದುರಿ, ಮಾರಾಟ ಗುಮಾಸ್ತ ಪರಶುರಾಮ ಚಲವಾದಿ, ಸೇವಕ ವೀರೇಶ್ ಚಿನ್ನಿ ಸೇರಿದಂತೆ, ಊರಿನ ಮುಖಂಡರು, ಸ್ಥಳೀಯ ರೈತರು ಮತ್ತು ಸಂಘದ ಸದಸ್ಯರು, ಬ್ಯಾಂಕ್ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

## ಶಿಥಿಲಾವಸ್ಥೆಯ ಶಾಲಾ ಕಟ್ಟಡ; ಮೂಲಸೌಕರ್ಯಗಳಿಗೂ ಕೊರತೆ

### ಕುಕನೂರು ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಮಕ್ಕಳ ಸುರಕ್ಷತೆ ಪ್ರಶ್ನೆ; ಶೌಚಾಲಯ, ಕುಡಿಯುವ ನೀರಿನ ಸಮಸ್ಯೆಗೂ ಪರಿಹಾರ ಯಾವಾಗ

ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣದ ಸರ್ಕಾರಿ ಮಾಧ್ಯಮಿಕ ಶಾಲೆಯ ಕಟ್ಟಡಗಳು ಶಿಥಿಲಾವಸ್ಥೆಗೆ ತಲುಪಿದ್ದು, ವಿದ್ಯಾರ್ಥಿಗಳ ಸುರಕ್ಷತೆ ಕುರಿತು ಪೋಷಕರಲ್ಲಿ ಆತಂಕ ಮೂಡಿಸಿದೆ. ಇದರ ಜೊತೆಗೆ ವಿದ್ಯಾರ್ಥಿಗಳಿಗೆ ಅಗತ್ಯವಾದ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಕರ್ಯಗಳ ಕೊರತೆಯೂ ಶಾಲೆಯಲ್ಲಿ ಕಂಡುಬರುತ್ತಿದೆ ಎಂಬುದು ಪೋಷಕರ ಆರೋಪವಾಗಿದೆ.**

ಶಾಲೆಯ ಹಳೆಯ ಕಟ್ಟಡದ ಮೇಲ್ಚಾವಣಿಯಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಹಲವು ಭಾಗಗಳಲ್ಲಿ ಕಟ್ಟಡದ ಮೇಲ್ಭಾಗದ ಸಿಮೆಂಟ್ ಹಾಗೂ ಪ್ಲಾಸ್ಟರ್ ಕಳಚಿರುವುದು ಕಂಡುಬರುತ್ತಿದೆ. ಮಳೆ ಬಂದ ಸಂದರ್ಭದಲ್ಲಿ ಮೇಲ್ಚಾವಣಿಯಿಂದ ನೀರು ಸೋರಿಕೆಯಾಗುವುದರಿಂದ ತರಗತಿಗಳಲ್ಲಿ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಇನ್ನು ಶಾಲೆಯ ಕೆಲವು ಕಂಬಗಳ ಕೆಳಭಾಗದ



ಪ್ಲಾಸ್ಟರ್ ಕಳಚಿ, ಕಟ್ಟಡದ ಒಳಭಾಗದ ನಿರ್ಮಾಣ ಭಾಗಗಳು ಕಾಣಿಸುತ್ತಿವೆ. ಹಳೆಯ ಕಟ್ಟಡದ ಸ್ಥಿತಿಯಿಂದಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವಾಗ ಪೋಷಕರಲ್ಲಿ ಆತಂಕ ಮೂಡಿದೆ.

ಶೌಚಾಲಯ-ಕುಡಿಯುವ ನೀರಿಗೂ ಸಮಸ್ಯೆ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸುರಕ್ಷಿತ ಕಟ್ಟಡದ ಜೊತೆಗೆ ಶುದ್ಧ ಕುಡಿಯುವ ನೀರು, ಸಮರ್ಪಕ ಶೌಚಾಲಯ ಹಾಗೂ ಸ್ವಚ್ಛ ಪರಿಸರ ಅತ್ಯಗತ್ಯ. ಆದರೆ ಶಾಲೆಯಲ್ಲಿ ಈ ಮೂಲಭೂತ ಸೌಕರ್ಯಗಳ ವಿಚಾರದಲ್ಲಿಯೂ ಸಮಸ್ಯೆಗಳಿದ್ದು, ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ ಎಂದು ಪೋಷಕರು ತಿಳಿಸಿದ್ದಾರೆ.





ವಿಶೇಷವಾಗಿ ಮಕ್ಕಳಿಗೆ ಸಮರ್ಪಕ ಶೌಚಾಲಯ ವ್ಯವಸ್ಥೆ ಹಾಗೂ ನಿರಂತರ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದು ಅಗತ್ಯವಾಗಿದೆ.

ಶಾಲಾ ಕಟ್ಟಡದ ದುರಸ್ತಿ ಹಾಗೂ ಮೂಲಭೂತ ಸೌಕರ್ಯಗಳ ಸಮಸ್ಯೆಗಳನ್ನು ಒಟ್ಟಾಗಿ ಪರಿಹರಿಸಬೇಕು ಎಂಬುದು ಪೋಷಕರು ಮತ್ತು ಸಾರ್ವಜನಿಕರ ಒತ್ತಾಯವಾಗಿದೆ. ಅಧಿಕಾರಿಗಳು ತುರ್ತು ಗಮನಹರಿಸಲಿ ಶಾಲೆಯ ಕಟ್ಟಡದ ಸುರಕ್ಷತಾ ಸ್ಥಿತಿಯನ್ನು ಸಂಬಂಧಪಟ್ಟ ಶಿಕ್ಷಣ ಇಲಾಖೆ ಅಧಿಕಾ-ರಿಗಳು ತಾಂತ್ರಿಕವಾಗಿ ಪರಿಶೀಲಿಸಬೇಕು. ದುರಸ್ತಿ ಸಾಧ್ಯವಿರುವ ಕಟ್ಟಡಗಳನ್ನು ದುರಸ್ತಿ ಮಾಡುವುದು ಹಾಗೂ ಅಪಾಯಕಾರಿಯಾಗಿರುವ ಭಾಗಗಳಿಗೆ ಅಗತ್ಯ ಕ್ರಮ ಕೈಗೊಂಡು, ವಿದ್ಯಾರ್ಥಿಗಳಿಗೆ ಸುರಕ್ಷಿತ ತರಗತಿ ಕೊಠಡಿಗಳನ್ನು ಒದಗಿಸಬೇಕು. ಅದರ ಜೊತೆಗೆ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸಿ, ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ನಿರ್ಮಿಸಬೇಕಾಗಿದೆ. ಮಕ್ಕಳ ಭವಿಷ್ಯ ರೂಪಿಸುವ ಸರ್ಕಾರಿ ಶಾಲೆಯಲ್ಲಿ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಬೇಕಿದ್ದು, ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವರೇ ಎಂಬುದನ್ನು ಕಾದು ನೋಡಬೇಕಿದೆ.

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 46ನೇ ವಾರ್ಷಿಕ ಮಹಾಸಭೆ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕನಕಗಿರಿ ಇದರ 46ನೇ ಸಾಲಿನ ವಾರ್ಷಿಕ ಮಹಾಸಭೆಯು ಸೆ, 24, 2026 ಗುರುವಾರದಂದು ಅತ್ಯಂತ ಯಶಸ್ವಿಯಾಗಿ ಜರುಗಿತು. ಸಂಘದ ಅಧ್ಯಕ್ಷರಾದ ಬಿ. ಕನಕಪ್ಪ ಚಲವಾದಿಯವರ ಅಧ್ಯಕ್ಷತೆಯಲ್ಲಿ ಈ ಮಹಾಸಭೆಯು ಜರುಗಿತು. ಸಂಘದ ಪ್ರಮುಖ ವಿವರಗಳು: ಈ ಸಹಕಾರ ಸಂಘವು ಕನಕಗಿರಿಯಲ್ಲಿ ನೋಂದಣಿ ಸಂಖ್ಯೆ: ಉ. ನೋಂ. ರಾ. ಸ. 8 ಆ. ಜ. ಎನ್. ಸ. 4967/12-3-1981 ರಂದು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದ್ದು, ದೀರ್ಘಕಾಲದಿಂದ ರೈತ ಪರ ಸೇವೆಗಳನ್ನು ಸಲ್ಲಿಸುತ್ತಾ ಬಂದಿದ್ದು, "ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ" ಎನ್ನುವ ಸಹಕಾರ ತತ್ವದಡಿಯಲ್ಲಿ ಈ ಸಂಘವು ಕಾರ್ಯನಿರ್ವಹಿಸುತ್ತಿದೆ.**

ಸಭೆಯಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿ, ರೈತರ ಕಲ್ಯಾಣಕ್ಕಾಗಿ ಕೈಗೊಳ್ಳಬೇಕಾದ ಮುಂದಿನ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚೆ ನಡೆಸಿದರು.



ಸಭೆಯಲ್ಲಿ ಸ್ಥಳೀಯ ರೈತರು ಮತ್ತು ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕನಕಗರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 46ನೇ ವರ್ಷದ 2025-2026ನೇ ಸಾಲಿನ ವಾರ್ಷಿಕ ವರದಿಯ ಮಂಡನೆ. ಪ್ರಸಕ್ತ ಸಾಲಿನಲ್ಲಿ ಸಂಘಕ್ಕೆ ಲಾಭವಾಗಿದ್ದು, ನಿವ್ವಳ ಲಾಭವು 10,60,466=50 ರೂ.ಗಳಷ್ಟಿದೆ. ಮುಂದಿನ ವರ್ಷದಲ್ಲಿ ಹೆಚ್ಚಿನ ಸಾಲ ವಿತರಣೆ ಮಾಡುವ ಉದ್ದೇಶವಿದ್ದು, ಸದಸ್ಯರು ಪಡೆದ ಲಾಭವನ್ನು ಕಾಲಮಿತಿಯಲ್ಲಿ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸುವಂತೆ ಸಹಕಾರ ಸಂಘದ ಅಧ್ಯಕ್ಷರಾದ ಬಿ. ಕನಕಪ್ಪ ಚಲುವಾದಿ ಕೋರಿದರು. ಈ ವಾರ್ಷಿಕ ವರದಿಯನ್ನು ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ವಿಜಯಕುಮಾರ ತೆಗ್ಗಿನಮನಿ ಹಾಗೂ ಅಧ್ಯಕ್ಷರಾದ ಬಿ. ಕನಕಪ್ಪ ಚಲುವಾದಿಯವರ ನೇತೃತ್ವದಲ್ಲಿ ಕಾರ್ಯಕಾರಿ ಮಂಡಳಿಯ ಪರವಾಗಿ ಮಂಡಿಸಿದ್ದು, ಸಹಕಾರ ಇಲಾಖೆ ಮತ್ತು ಆರ್.ಕೆ.ಡಿ.ಸಿ. ಬ್ಯಾಂಕ್ ರಾಯಚೂರು ಹಾಗೂ ಕನಕಗಿರಿ ಅಧಿಕಾರಿಗಳ ಸಹಕಾರವನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು. ಮುಂದಿನ ಸಾಲಿನ ಮುಂಗಡ ಪತ್ರ: ಸಂಘದ 2025-2026ರ ಲೆಕ್ಕ ಪತ್ರಗಳನ್ನು ಹಾಗೂ 2026-2027ನೇ ಸಾಲಿನ ಮುಂಗಡ ಪತ್ರವನ್ನು ಮಂಜೂರು ಮಾಡುವಂತೆ ಕೋರಲಾಯಿತು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕನಕಗಿರಿ ಇದರ 2025-2026ನೇ ಸಾಲಿನ ಆರ್ಥಿಕ ಹಾಗೂ ವಾರ್ಷಿಕ ಪ್ರಗತಿಯ ಪ್ರಮುಖ ವಿವರಗಳು: ಈ ಸಹಕಾರ ಸಂಘದ ಒಟ್ಟು ಷೇರು ಬಂಡವಾಳವು 77,60,831=00 ರೂ.ಗಳಷ್ಟಿದ್ದು, ವಿವಿಧ ನಿಧಿಗಳ ಒಟ್ಟು ಮೊತ್ತವು 47,27,547=03 ರೂ. ಗಳನ್ನು ಹೊಂದಿದೆ. ಸದಸ್ಯರ ವಿವಿಧ ಸಾಲಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಒಟ್ಟು 5,03,25,000=00 ರೂ.ಗಳ ವ್ಯವಹಾರವಿರುತ್ತದೆ. ವ್ಯಾಪಾರ, ಲಾಭ ಮತ್ತು ಹಾನಿ : ಸಂಘದ ವ್ಯಾಪಾರ ಪತ್ರಿಕೆಯ ಪ್ರಕಾರ ಒಟ್ಟು ವ್ಯಾಪಾರ ಮೊತ್ತ 16,61,961=00 ರೂ.ಗಳಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸಂಘವು ಒಟ್ಟು 10,60,466=50 ರೂ. ಗಳ ನಿವ್ವಳ ಲಾಭವನ್ನು ಗಳಿಸಿದೆ.

ಮುಂದಿನ ವರ್ಷದ ಯೋಜನೆ (2026-2027) : ಮುಂಬರುವ ಸಾಲಿನಲ್ಲಿ ಸದಸ್ಯರಿಗೆ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಾಲ ವಿತರಣೆ ಮಾಡಲು ಮತ್ತು ಸಂಘದ ಆರ್ಥಿಕ ಶಕ್ತಿಯನ್ನು ಮತ್ತಷ್ಟು ವಿಸ್ತ-ರಿಸಲು ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳಾದ ವಿಜಯಕುಮಾರ ತೆಗ್ಗಿಮನಿ (M.Com), ಹಾಗೂ ಉಪಾಧ್ಯಕ್ಷ ಮಹಾಂತೇಶ ಕೊಡ್ಲಿ ಸೇರಿದಂತೆ ಕಾರ್ಯಕಾರಿ ಮಂಡಳಿಯ ನಿರ್ದೇಶಕರಾದ ಶರಣಬಸಪ್ಪ ಕಲೀಕೇರಿ, ಕನಕರೆಡ್ಡಿ ಕೆರಿ, ರಾಘವೇಂದ್ರ ಚಿತ್ರಗಾರ, ಸಿಂಧುಬಲ್ಲಾಳ ಕುಂಬಾರ, ದುರುಗೇಶ ಗಂಗಾಮತ, ಅಮರೇಶ ಭಾವಿಕಟ್ಟಿ, ಸಣ್ಣ ರಾಮಣ್ಣ ಬ್ಯಾಳಿ, ಸಂಗಪ್ಪ ಹೂಗಾರ, ವನಜಾಕ್ಷಿ ಆಗೋಲಿ, ಶರಣಮ್ಮ ಸಜ್ಜನ, ಮತ್ತು ಸಿಬ್ಬಂದಿ ವರ್ಗದವರಾದ ಅಕೌಂಟೆಂಟ್ ಮಂಜುನಾಥ ರೆಡ್ಡಿ ಮಾದಿನಾಳ, ಕಂಪ್ಯೂಟರ್ ಆಪರೇಟರ್ ಸೆಕ್ಷಾವಲಿ ಬಿಳೆಕುದುರಿ, ಮಾರಾಟ ಗುಮಾಸ್ತ ಪರಶುರಾಮ ಚಲವಾದಿ, ಸೇವಕ ವೀರೇಶ್ ಚಿನ್ನಿ ಸೇರಿದಂತೆ, ಊರಿನ ಮುಖಂಡರು, ಸ್ಥಳೀಯ ರೈತರು ಮತ್ತು ಸಂಘದ ಸದಸ್ಯರು, ಬ್ಯಾಂಕ್ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಲೇಖಕರ ದಿನಚರಿ...

## ಸತ್ಯಾತ್ಮತೀರ್ಥರು

ವಚನ ಪರಿಪಾಲನೆಗೆ ಯಾರು ನಿಜಮೂರುತಿಯೊ ಶಿಷ್ಟ ರಕ್ಷಕ ಸುಗುಣ ಆ ಕೃಪಾಸಿಂಧು. ಆದರ್ಶ ಜೀವನಕ್ಕೆ ಯಾರು ನಿಜ ಮಾದರಿಯೊ ಆ ರಾಮ ಚರಣ ನೆನೆ ಮುದ್ದುರಾಮ.... ಶಿಷ್ಟ ರಕ್ಷಕರಾಗಿ, ಶ್ರೀರಕ್ಷೆಯಾಗಿ, ಮಾರ್ಗದರ್ಶಕರಾಗಿ, ಧರ್ಮ ಪ್ರವರ್ತಕರಾಗಿ ಅನುಗಾಲ ಆಪತ್ಬಂಧೂ ಆಗಿ ಕೈಹಿಡಿದು ನಡೆಸುವ ಆ ಮಹಾ ಮಹಿಮರೆ ಸತ್ಯಾತ್ಮತೀರ್ಥರು. ಮುಗುಳ್ನಗೆಯಿಂದ ಜಗತ್ತನ್ನು ಉದ್ಧರಿಸುತ್ತ ತಮ್ಮಲ್ಲಿ ಬೇಡಿ ಬಂದವರಿಗೆ ಅಕ್ಷತೆಯ ಆಶೀರ್ವಾದವಾಗಿ ಹರಸುತ್ತ ಸಕಲ ಅಭಿಷ್ಟೇ ಗಳ ಪೂರೈಸುವ ಕಲಿಯುಗದ ದೈವಾಂಶ ಸಂಭೂತರೆಂದರೆ ಅವರು ಶ್ರೀ ಶ್ರೀ ಶ್ರೀ ಸತ್ಯಾತ್ಮತೀರ್ಥರು.

ಅವರ ಪ್ರವಚನಗಳು ಅಕ್ಷಯ ಭೋದವಾಗಿ ಅಕ್ಷಯ ಸೌಖ್ಯವ ದಯಪಾಲಿಸುತ್ತವೆ. ಬರಹಗಳಲ್ಲಿ ಅವರ ಮಹಾತ್ಮೆಯನ್ನು ವರ್ಣಿಸಲಾಗದು. ಉತ್ತರಾದಿ ಮಠದ 42ನೇ ಪೀಠಾಧಿಪತಿಯಾಗಿ ಧಾರ್ಮಿಕ ಕ್ಷೇತ್ರದ ಜೊತೆಗೆ ಸಾಮಾಜಿಕ ಶೈಕ್ಷಣಿಕ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಅಗಣಿತ ಕೊಡುಗೆಗಳಿಂದ ಗುರುತಿಸಿಕೊಂಡ ಮಹಾತ್ಮ ರಿವರು. ನಿರ್ಮಲ ನಿಲುವಿನಿಂದ ಪರಿ ಜನರಿಗಾಗಿ ಮಿಡಿಯುವ ಹೃದಯ ವೈಶಾಲ್ಯತೆಯಿಂದ ಘನವಾದ ಅವರ ನಡೆ-ನುಡಿ ಎಂತಹವರನ್ನು ಮಂತ್ರಮುಗ್ಧರನ್ನಾಗಿಸುವುದು.

ಸಾಧು ಸಾತ್ವಿಕ ಬಿಂಬದಿಂದ ಗಂಭೀರ ಮುಖ ಮುದ್ರೆಯಿಂದ ಅಕ್ಕಜ ಮೂಡಿಸುವ ಪಾಂಡಿತ್ಯದಿಂದ ಚಿಕ್ಕ ವಯಸ್ಸಿನಲ್ಲಿ ಸನ್ಯಾಸತ್ವ ಪಡೆದ ಕೀರ್ತಿ ಇವರದು. ಇದಕ್ಕಾಗಿ ಇವರಿಗೆ"ಅಭಿನವ ರಘೋತ್ತಮ ತೀರ್ಥರು" ಎನ್ನಲಾಗುತ್ತದೆ. ಪಂಡಿತೋತ್ತಮರ ವಂಶದಲ್ಲಿ ಹುಟ್ಟಿ ಜಗವನ್ನು ಬೆಳಗುತ್ತಿಹ ಇಂಥ ಮಹಾತ್ಮರನ್ನು ಪಡೆದವರೆ ಧನ್ಯರು .ಇವರು ದ್ವೈತ ವೇದಾಂತದ ಆಳ ಅಧ್ಯಯನ ಮಾಡಿದ್ದಾರೆ. ತರ್ಕಶಾಸ್ತ್ರ ,ನ್ಯಾಯಶಾಸ್ತ್ರ, ವ್ಯಾಕರಣಶಾಸ್ತ್ರ, ಶ್ರೀಮನ್ ನ್ಯಾಯ ಸುಧಾ, ವ್ಯಾಸ ತ್ರಯ ಗ್ರಂಥ,



ಸಾಹಿತ್ಯ ಹೀಗೆ ಅಪಾರ ಪಾಂಡಿತ್ಯವನ್ನು ಗ್ರಹಿಸಿದ್ದಾರೆ. ಅವರ ಗುರುಗಳಾದ ಶ್ರೀ ಸತ್ಯ ಪ್ರಮೋದ ತೀರ್ಥರ ಆಶ್ರಯದಲ್ಲಿ ಉಪನಿಷತ್ತು ಬ್ರಹ್ಮಸೂತ್ರಗಳನ್ನು ಅರಿತು ಅದನ್ನು ಸರಳ ಭಾಷೆಯಲ್ಲಿ ಭಕ್ತರಿಗೆ ತಿಳಿ ಹೇಳುತ್ತಿದ್ದಾರೆ.

ಆತ್ಮ ಪರಮಾತ್ಮನ ನಡುವಿರುವ ಸೇತುವೆಯಾಗಿ ಮಧ್ವ ಪರಂಪರೆ ಬೆಳಗುತ್ತ ತಮ್ಮ ತಪೋಬಲದಿಂದ ಭಕ್ತರಿಗೆ ಅನುಗ್ರಹಿಸುವ ಅಚ್ಯುತ ಸೌಖ್ಯವಾಗಿದ್ದಾರೆ. ಇವರ ಜ್ಞಾನದ ಅಚ್ಚ ಬೆಳದಿಂಗಳಿನಲ್ಲಿ ಅನೇಕ ಪವಾಡಗಳು ನಡೆಯುತ್ತಿವೆ. ಸರಳಿಕೆಯ ಮೈಗೂಡಿಸಿಕೊಂಡ ಪರಿಪೂರ್ಣತ್ವ ಇವರದು. ಧರ್ಮದಲ್ಲಿರುವ ಪರಮಪದವನ್ನು ಅರ್ಥಾನುವತ್ತಾಗಿ ಅಭಿಜ್ಞತೆ ನೀಡುವ ಗುರು ಆದ ಘನ ನಿಲುವಿನ ಗುರುಗಳಿವರು. ಇವರ ದರ್ಶನಕ್ಕಾಗಿ ಬರುವ ಭಕ್ತರಿಗೆ ಅಭಯ ನೀಡಿ ಆಶೀರ್ವದಿಸುವ ಗುರುಗಳು ದಿವ್ಯತೆಯ ಅಪೂರ್ವ ಸಂಗಮವಾಗಿದ್ದಾರೆ. ಆಪತ್ಕಾಲದ ಬಂಧು ಆಗಿದ್ದಾರೆ. ಧರ್ಮ ಜ್ಞಾನ ಕರುಣೆಯ ಸಾಕಾರಮೂರ್ತಿಯಾಗಿದ್ದಾರೆ.

ಅವರು ತಮ್ಮ ಬೋಧನೆಗಳನ್ನು ಅಕ್ಷರ ರೂಪದಲ್ಲಿ ಇಳಿಸಿ ವ್ಯಕ್ತಿತ್ವ ವಿಕಸನ ಹಾಗೂ ಮೌಲ್ಯಗಳ ಅಳವಡಿಕೆ ಸದಾಚಾರ ಶಿಷ್ಟಾಚಾರ ರೂಡಿಸಿಕೊಳ್ಳುವ ನೈತಿಕತೆ ಇವುಗಳ ಮೇಲೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಉಲ್ಲಾಸ, ಬಹು ಚಿತ್ ಜಗತ್, ಪ್ರವಚನ ಮಾಲೆಗಳು ,ಆತ್ಮಲಹರಿ, ಗಾಯಿತ್ರಿ ಮಂತ್ರದ ಮಹಿಮೆ, ಪುಷ್ಪಹಾಸ, ವಸುದೇವ ಉವಾಚ, ಮಹಾಭಾರತ ವನಪರ್ವ, ರಾಘವೇಂದ್ರ ಸ್ವಾಮಿಗಳ ಕೊಡುಗೆ, ವೆಂಕಟೇಶ ಮಹಾತ್ಮೆ, ವಿಷ್ಣುಪಾದಸ್ತುತಿ, ಹೀಗೆ ಅನೇಕ ಪುಸ್ತಕಗಳ ರಚಿಸಿ ಅವುಗಳ ಸಾರಾಂಶವನ್ನು ಸಾಮಾನ್ಯ-ರಿಗೂ ತಿಳಿಯುವಂತೆ ಬೋಧಿಸುವ ಅವರ ಪಾಂಡಿತ್ಯ ಅನುಭಾವದೆತ್ತರದ್ದು. ಇವರು ಅನೇಕ ಮಕ್ಕಳಿಗೆ ಅಭ್ಯಾಸ ಹೇಳುತ್ತ ಅವರ ಬದುಕಿಗೆ ದಿಗ್ದರ್ಶಿಯಾಗಿ ವಿಶ್ವ ಮಾಧ್ವ ಮಹಾಪರಿಷತ್ ನಿರ್ಮಿಸಿ ಧರ್ಮ ಜಾಗೃತಿಯನ್ನು ಶಿಕ್ಷಣದ ಮೂಲಕ ನೀಡುತ್ತಿದ್ದಾರೆ. ಅನೇಕ ಅ ಪ್ರಕಟಿತ ಗ್ರಂಥಗಳ ಸರಳಿಕರಿಸಿ ತಿಳಿ ಹೇಳುತ್ತಿದ್ದಾರೆ. ಅವುಗಳನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಸಾಮಾಜಿಕ ಮಾನವೀಯ ಮೌಲ್ಯಗಳನ್ನು ಸಾರುತ್ತ ಅನಂತಾಂಶನ ನಿಜ ಸ್ವರೂಪವಾಗಿ ಮಾನವತೆಯ ಅಪ್ರ ತಿಮರೂಪವಾಗಿ ಸತ್ಯಸಂಧರಾದ ಶ್ರೀಗಳು ಅಭಿಜ್ಞತೆಯ ಸಾಕ್ಷಾತರೂಪವಾಗಿದ್ದಾರೆ.

ಭಾವಶುದ್ಧಿ,ಚಿತ್ತಶುದ್ಧಿ ಇವುಗಳ ಆಚರಣೆ ಅನುಕರಣೆ ಹೇಳಿಕೊಡುತ್ತ ಭವ್ಯತೆಯ ಮೇರು ಪರ್ವತವಾಗಿ ಭಗವಂತನ ಚಿರಲೀಲೆ ತೋರಿಸುವ ಏಕೈಕ ಸೇತುವಾಗಿದ್ದಾರೆ. ಸಮಾಜದ ಪ್ರತಿ ಕಳಕಳಿ ಇರುವ ಶ್ರೀಗಳು ತಮ್ಮ ಅನೇಕ ಕಾರ್ಯಗಳಿಂದ ಅಭಿವಂದಿತಾರ್ಥರಾಗಿದ್ದಾರೆ. ಚಿಂತನಗಳಿಗೆ ಆಕಾರ ನೀಡಿ ಬೇಡಿದವರ ಪಾಲಿಗೆ ಅಮರಭೂಜವಾಗಿ, ಕಲಿಯುಗದಲ್ಲಿ ಅವತಾರ ವೆತ್ತಿದ ದೈವಾಂಶ ಸಂಭೂತರಾದ ಶ್ರೀಗಳು ಪ್ರಾತ:ಸ್ಮರಣೀಯರು. ಅವರ ಮೂಲಕ ಭಗವಂತನ ಕಾಣುತ್ತಿರುವ ನಾವೇ ಧನ್ಯರು. ಅವರ ಪಾದಾರವಿಂದಗಳಲ್ಲಿ ಅನೇಕ ಶಿರ ಸಾಷ್ಟಾಂಗ ನಮನಗಳನ್ನು ಅರ್ಪಿಸುತ್ತಾ ಅವರ ಆಶೀರ್ವಾದ ಅನುಗಾಲ ನಮಗೆ ಇರಲಿ ಎಂದು ಪ್ರಾರ್ಥಿಸೋಣ. ತಿಳಿಯದೆ ಏನಾದರೂ ಈ ಅಂಕಣದಲ್ಲಿ ತಪ್ಪಾಗಿದ್ದರೆ ಅವರಲ್ಲಿ ಕ್ಷಮೆ ಯಾಚಿಸುತ್ತೇನೆ. ಗುರುಗಳೇ ನಿಮ್ಮ ಪಾದಗಳಲ್ಲಿ ನನ್ನ ಅನಂತನಮನಗಳು...



ಆರತಿ ಏನ್ ರಾವ್

## ಅವಳ ಅಂತರಂಗ



(ನ್ಯಾನೋಕತೆ) ನಂದಮ್ಮ ಹಿರಿಯಳು ಆದರೆ ಹಿರಿತನಕ್ಕೆ ವ್ಯತಿರಿಕ್ತ ಸ್ವಭಾವ ಆಕೆಯದು. ಪ್ರತೀ ದಿನ ಅಕ್ಕ ಪಕ್ಕದವರ ಬಗ್ಗೆ ಅದಾವುದೋ ದ್ವೇಷದಲ್ಲಿಯೇ ಕನವರಿಸುತ್ತಿದ್ದಳು. ವಯಸ್ಸು ಎಪ್ಪತ್ತಾದರೂ ಮತ್ಸರದ ಮನಸ್ಸು ತಿಳಿಯಾಗಿರಲಿಲ್ಲ. ಅವಳ ಪಕ್ಕದ ಮನೆಯ ನಿಂಗ, ಪ್ರಾಮಾಣಿಕ, ಶ್ರಮಜೀವಿ, ಅಷ್ಟೇ ಅಲ್ಲ ಪರೋಪಕಾರಿ ಕೂಡ. ಯಾ-ರಿಗಾದರೂ ತೊಂದರೆಯಾದರೆ ಅದನ್ನು ಪರಿಹರಿಸುವಲ್ಲಿ ನಿಂಗ ಇರುತ್ತಿದ್ದ.

ಆದರೆ ನಿಂಗನ ಈ ಗುಣ ನಂದಮ್ಮನಲ್ಲಿ ಕಿಚ್ಚನ್ನು ಹೊತ್ತಿಸಿತ್ತು. ತಾನೂ ಮಾಡಳು, ಇನ್ನೊಬ್ಬರು ಮಾಡುವುದನ್ನು ಕಂಡರೂ ಆಗದು ಎಂಬಂತಿದ್ದಳು ನಂದಮ್ಮ. ಮೇಲಿನ ಮತ್ಸರದಿಂದ ಅವನು ಮಾಡಿದ್ದು, ಹೇಳಿದ್ದು, ಬರೆದದ್ದು, ಕೊಟ್ಟಿದ್ದು ಎಲ್ಲವನ್ನೂ ಕಿಚ್ಚಿನಿಂದಲೇ ನೋಡುತ್ತ ಅವನುಮಾಡಿದ ಒಳ್ಳೆಯದನ್ನೂ ತಳ್ಳಿಹಾಕುವ ಮನೋಧರ್ಮವನ್ನು ಬೆಳೆಸಿಕೊಂಡು ಕೊನೆಗಾಲದಲ್ಲಿ ಅವಳ ಅಂತರಂಗ ಋಣಾತ್ಮಕತೆಯ ಗೂಡಾರವಾಗಿತ್ತು. ಇದನ್ನರಿತ ನಂದಮ್ಮಳ ಮೊಮ್ಮಗ ಅಜ್ಜಿಯಲ್ಲಿನ ಮತ್ಸರವನ್ನು ದೂರಮಾಡಲು ಯೋಚಿಸಿದ.

ಅದಕ್ಕೆ ಸರಿಯಾಗಿ ನಂದಮ್ಮ ಒಮ್ಮೆ ಸ್ಮೃತಿ ತಪ್ಪಿ ಹುಷಾರಿಲ್ಲದಾದರು. ಆಗ ಅವರನ್ನು ಚಿಕಿತ್ಸೆಗೆಂದು ದೂರದ ಆಸ್ಪತ್ರೆಗೆ ನಿಂಗ ತಲುಪಿಸಿದ್ದ. ನಂತರ ಗುಣಮುಖರಾಗಿದ್ದರು ನಂದಮ್ಮ. ಇದನ್ನರಿತ ಅವಳ ಮೊಮ್ಮಗ ಒಂದು ದಿನ "ಅಜ್ಜಿ ಅಂದು ನಿನಗೆ ಹುಷಾರಿಲ್ಲವಾಗಿ-ತ್ತಲ್ವ ಆದಿನ ನಿನ್ನ ನೆರವಿಗೆ ಬಂದವರು ಅದೇ ಆ ಮನೆಯ ನಿಂಗು ಅಂಕಲ್" ಎಂದಾಗ ಆತನ ಬಗ್ಗೆ ಇದ್ದ ಮತ್ಸರದ ಕಾವು ತುಸು ಕಡಿಮೆಯಾಯಿತಾದರೂ "ಛೇ..! ಈತನೇನು ನನಗೆ ಸಹಾಯ ಮಾಡಿದ್ದು..? ಎಂಬ ತಾತ್ಸಾರವಿತ್ತು. ಅವಳ ಮನದಾಳದಲ್ಲಿಯ ಕಿಚ್ಚಿನ ಛಾಯೆ ಮಾಸಿರಲಿಲ್ಲ. ಒಮ್ಮೆ ಹೀಗೇ ಒಬ್ಬಳೇ ಕುಳಿತಿ-ರುವಾಗ, ತನ್ನನ್ನು ತಾನೇ ಆತ್ಮಾವಲೋಕನ ಮಾಡಿಕೊಂಡು ಅಂದಿನಿಂದ ದ್ವೇಷವನ್ನು ಮರೆಯುವ ನಿರ್ಧಾರ ಮಾಡಿ ಮರೆತ ನಂದಮ್ಮಳಿಗೆ ಆದಿನದಿಂದ ಕಣ್ತುಂಬ ನಿದ್ದೆ ಬರಲಾರಂಬಿಸಿತು.

"ಅಯ್ಯೋ ಇಷ್ಟು ದಿನ ನಿಂಗನ ಮೇಲಿನ ಕಿಚ್ಚಿನಿಂದ ನಿದ್ದೆಯಿರದೆ ತೊಂದರೆ ಪಟ್ಟಿದ್ದು ನಾನೇ. ಎಂತ ಸುಂದರ ಕ್ಷಣಗಳನ್ನು ಹಾಳು ಮಾಡಿಕೊಂಡೆ" ಎಂದು ಮರುಗಿದಳು. ತನ್ನ ಮೊಮ್ಮಗನಿಗೆ ಅವಳ ನೆಮ್ಮದಿಯ ನಿದ್ದೆಗೆ, ಕಣ್ತೆರೆಸಿದ ರೀತಿಗೆ ಮನದಲ್ಲೇ ಧನ್ಯವಾದ ಹೇಳಿದಳು ಮತ್ಸರ, ಕಿಚ್ಚು ನಮ್ಮ ನೆಮ್ಮದಿಗೆ ಕೇಡು ಎಂಬ ಅರಿವಾಯಿತು. ಅವಳ ಅಂತರಂಗದಲ್ಲಿ ಮತ್ಸರದ ಬದಲು ಮಮತೆ, ಪ್ರೀತಿ ಜಾಗವನ್ನು ಪಡೆಯಿತು.

ಶುಭಲಕ್ಷ್ಮಿ ಆರ್.ನಾಯಕ್.

## ಎಚ್ಚರ..ಚಂದಿರ



ಓ! ಹುಣ್ಣಿಮೆಯ ಚಂದ್ರ
ಭುವಿಗೆ ಮುಡಿಸಿದ ಲಾಂದ್ರ
।
ಉಲ್ಲಾಸದಿ ಬೆಳ್ದಿಂಗಳ ರಾತ್ರಿ
ಸಂಭ್ರಮದಲಿ ಮೀಯುತ್ತಿದೆ
ಧಾತ್ರಿ ॥ 1 ॥

ಬಾನಚುಕ್ಕೆಯ ಮಕ್ಕಳು
ತೂಗುಬಿಟ್ಟ ಮಾಪೆಯೋ ।
ನೆಲದ ಚಿಣ್ಣರಿಗಾಗಿ ಏರಿಸಿದ
ಬೆಳಕಿನ ಬುಟ್ಟಿಯೋ ॥ 2 ॥

ಶೀಗಿ ಗೌರಿಯ ಸಂಭ್ರಮದಲಿ
ಮೈಮರೆಯಬೇಡ ಚಂದಿರ ।
ಧನದಾಹಿಗಳು ಅಲ್ಲಿಗೂ
ಲಗ್ಗೆ ಇಡುವರು ಎಚ್ಚರ ॥
3 ॥

ನಿನ್ನ ಚೆಲುವ ಮೊಗವನು
ಅದಿರಿಗಾಗಿ ಬಗೆವರು ।
ಹಮ್ಮಿನಲ್ಲಿ ಬಂದು ಅಲ್ಲಿ
ದುರಾಸೆ ಧ್ವಜವ ನೆಡುವರು
॥ 4 ॥

ಚಂದಮಾಮ ಎಂದಿಗೂ
ಮುಗ್ಧಮನವ ರಂಜಿಸು ।
ಕ್ಷುದ್ರ ಆಶೆ ಬಾರದಂತೆ
ಮನುಕುಲವ ಹರಸು ॥ 5 ॥

ಡಿ.ಎನ್.ಅಕ್ಕಿ.

## ಗಜಲ್



ಕಂಡ ನೂರಾರು
ನೋವುಗಳನು ನೆನೆವವರು
ಯಾರಿಲ್ಲ ಇಲ್ಲಿ
ಮೊಂಡು ಕತ್ತಿಗಳ ತಿಕ್ಕಿ
ಮಸೆವವರು ಯಾರಿಲ್ಲ ಇಲ್ಲಿ

ಗಿಡುಗನಂತೆ ಎರಗಿ
ಕುಕ್ಕುವವರೇ ಬಹಳಿಹರು
ಭರವಸೆಯ ಕೈಗಳನು
ನೀಡುವವರು ಯಾರಿಲ್ಲ ಇಲ್ಲಿ

ತುಡುಗ ದನದಂತೆ ಹೊಕ್ಕು
ಮೇಯುವರು ಎಲ್ಲರೂ
ಕರುಳು ಕರಗಿ ಬಂದು
ರಮಿಸುವವರು ಯಾರಿಲ್ಲ ಇಲ್ಲಿ

ಅಂಗೈಲಿ ಅರಮನೆ ತೋರುವ
ಜಾಣರಿಹರು ಅಲ್ಲವೇ
ನೊಂದು ಬೆಂದ ಕಂಬನಿಯ
ಒರೆಸುವವರು ಯಾರಿಲ್ಲ ಇಲ್ಲಿ

ಮೋಸದ ಮಂದೆ ಆಗಿಹುದು
ಈ ಜಗವು ಬೇಗಂ
ನಂಬುಗೆಯ ಭದ್ರ ತೋಳ್ಗಳಲಿ
ಇರಿಸುವವರು ಯಾರಿಲ್ಲ ಇಲ್ಲಿ

ಹಮೀದಾಬೇಗಂ
ದೇಸಾಯಿ.ಸಂಕೇಶ್ವರ

## ಓದಿದಂತೇ ವಿಶಿಷ್ಟ ಸೊಗಡು

# ಕಣ್ಣಳತೆಗೆ ಕಂಡದ್ದು

ನಾವು ಏನನ್ನಾದರೂ ಪರಿಶೀಲಿಸಬೇಕೆಂದಾಗ ಮೊದಲು ನಮ್ಮ ಸುತ್ತಮುತ್ತಲನ್ನು ಗಮನಿಸುತ್ತೇವೆ. ನಮ್ಮ ದೃಷ್ಟಿಯ ವ್ಯಾಪ್ತಿಗೆ ಸಿಕ್ಕಷ್ಟು ವಿಚಾರಗಳನ್ನು ಗ್ರಹಿಸುತ್ತೇವೆ. ಆದರೆ ಕಂಡದ್ದರಾಚೆಗೂ ಅನೇಕ ಅರ್ಥಗಳು, ಅನುಭವಗಳು ಮತ್ತು ಒಳನೋಟಗಳು ಅಡಗಿರುತ್ತವೆ. ಅಂತಹ ಒಳನೋಟಗಳನ್ನು ತಮ್ಮ ಕಣ್ಣಳತೆಗೆ ಕಂಡ ವಿಚಾರಗಳ ಮೂಲಕ ಓದುಗರ ಮುಂದೆ ತೆರೆದಿಡುವ ಕೃತಿ 'ಕಣ್ಣಳತೆಗೆ ಕಂಡದ್ದು'.

ಶೋಭಾ ಶಂಕರಾನಂದ ಅವರ ಮೊದಲ ಕೃತಿಯಾದ ಈ ಲೇಖನಮಾಲೆಯಲ್ಲಿ ಸಾಮಾಜಿ-ಕ ಕಳಕಳಿ, ಸ್ತ್ರೀ ಸಂವೇದನೆ, ಮಕ್ಕಳ ಭವಿಷ್ಯದ ಕುರಿತ ಕಾಳಜಿ, ವ್ಯಕ್ತಿತ್ವ ವಿಕಸನ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳು, ಹಲವು ಗಣ್ಯ ವ್ಯಕ್ತಿಗಳ ಪರಿಚಯ ಹಾಗೂ ಅವರ ಬದುಕಿನ ಮೌಲ್ಯಗಳು ಹೀಗೆ ವೈವಿಧ್ಯಮಯ ವಿಚಾರಧಾರೆಗಳು ಹ-ರಿದುಬಂದಿವೆ. ಒಂದೊಂದು ಲೇಖನವೂ ಒಂದೊಂದು ಚಿಂತನೆಯ ಕಿಟಕಿಯನ್ನು ತೆರೆದು, ಓದುಗರನ್ನು ಹೊಸ ದೃಷ್ಟಿಕೋನದತ್ತ ಕರೆದೊಯ್ಯುತ್ತದೆ.

ಈ ಕೃತಿಯ ಮೊದಲ ಲೇಖನ 'ಕುಂಭಮೇಳ ಮತ್ತು ನಾಗ ಸಾಧುಗಳು'. ಪ್ರಯಾಗ್‌ರಾಜ್‌ನಲ್ಲಿ ನಡೆದ ಕುಂಭಮೇಳದ ಹಿನ್ನೆಲೆಯಲ್ಲಿನ ಧಾರ್ಮಿಕ ವೈಭವ, ಸನಾತನ ಪರಂಪರೆಯ ಮಹತ್ವ ಹಾಗೂ ನಾಗ ಸಾಧುಗಳ ಜೀವನದ ಕುರಿತಾಗಿ ಲೇಖಕಿ ಮನಮುಟ್ಟುವಂತೆ ವಿವರಿಸಿದ್ದಾರೆ. ನಾಗ ಸಾಧುಗಳ ಜೀವನಶೈಲಿ, ಅವರ ವೈರಾಗ್ಯ ಮತ್ತು ಧರ್ಮದ ಮೇಲಿನ ನಿಷ್ಠೆಯನ್ನು ಓದುತ್ತಿದ್ದಂತೆ ಅವರ ಬದುಕಿನ ಬಗ್ಗೆ ಕುತೂಹಲವೂ ಗೌರವವೂ ಮೂಡುತ್ತದೆ. ಯಾವುದೇ ಫಲಾಪೇಕ್ಷೆಯಿಲ್ಲದೆ ಧರ್ಮಪರಂಪರೆಯನ್ನು ಕಾಪಾಡುವ ಅವರ ತ್ಯಾಗದ ಬದುಕಿನ ಪರಿಚಯ ಈ ಲೇಖನದ ವಿಶೇಷತೆ.

'ಕೃಷ್ಣಶಿಲೆ ಮಂದಸ್ಮಿತ ರಾಮಲೀಲಾ' ಲೇಖಕಿಂ-ರು ವೈಯಕ್ತಿಕ ಅನುಭವದ ಸ್ಪರ್ಶ ಹೊಂದಿರುವ ಮತ್ತೊಂದು ಮನೋಜ್ಞ ಲೇಖನ. ರಾಮಲಲ್ಲಾನ ದರ್ಶನದ ಸಂದರ್ಭವನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಡುತ್ತಾ, ಅಲ್ಲಿನ ಭಕ್ತಿ, ಸಂಭ್ರಮ ಮತ್ತು ಸಕಾರಾತ್ಮಕ ವಾತಾವರಣವನ್ನು ಓದುಗ-ರಿಗೂ ಅನುಭವಿಸುವಂತೆ ಮಾಡಿದ್ದಾರೆ. 51 ಇಂಚು ಎತ್ತರದ ಕಪ್ಪು ಶಿಲೆಯಲ್ಲಿ ಮೂಡಿಬಂದ ಬಾಲರಾಮನ ವಿಗ್ರಹದ ಸೌಂದರ್ಯವನ್ನು ವರ್ಣಿಸುವಾಗ ಲೇಖಕಿಯ ಭಾವತೀವ್ರತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ವಿಗ್ರಹದ ನಿರ್ಮಾತೃ ಶಿಲ್ಪಿ ಅರುಣ್ ಯೋಗಿರಾಜ್ ಅವರ ಪರಿಚಯದ ಜೊತೆಗೆ, ಅವರ ಕೈಚಳಕದಲ್ಲಿ ಅರಳಿದ ಇನ್ನಿತರ ಶಿಲ್ಪಗಳ ಕುರಿತೂ ಲೇಖಕಿ ಪರಿಚಯಿಸಿದ್ದಾರೆ.

'ವೈರಾಗ್ಯ ನಿಧಿ ಅಕ್ಕ ಮಹಾದೇವಿ' ಲೇಖನದಲ್ಲಿ ಹನ್ನೆರಡನೇ ಶತಮಾನದ ವಚನಕಾರ್ತಿ ಅಕ್ಕಮಹಾದೇವಿಯ ವ್ಯಕ್ತಿತ್ವ ಮತ್ತು ವೈಚಾ-ರಿಕತೆಯನ್ನು ಪರಿಚಯಿಸಲಾಗಿದೆ. ರಾಜಪ್ರಭುತ್ವದ ಬಂಧನಗಳನ್ನು ಧಿಕ್ಕರಿಸಿ, ತನ್ನದೇ ಆದ ಸ್ವತಂತ್ರ ಚಿಂತನೆ ಹಾಗೂ ವಚನಗಳ ಮೂಲಕ ಬದುಕಿನ ಸತ್ಯಗಳನ್ನು ಅನಾವರಣಗೊಳಿಸಿದ ಅಕ್ಕಮಹಾದೇವಿಯ ಜೀವನದ ಒಳನೋಟಗಳನ್ನು ಲೇಖಕಿ ವಿಶ್ಲೇಷಿಸಿದ್ದಾರೆ. ಸ್ತ್ರೀ ಅಸ್ತಿತ್ವ, ಆತ್ಮಗೌರವ ಮತ್ತು ಸ್ವತಂತ್ರ ಚಿಂತನೆಯ ನೆಲೆಯಲ್ಲಿ ಅಕ್ಕಮಹಾದೇವಿಯ ವ್ಯಕ್ತಿತ್ವವನ್ನು ನೋಡುವ ಪ್ರಯತ್ನ ಇಲ್ಲಿ ಗಮನಾರ್ಹವಾಗಿದೆ.




'ವೀಕ್ಷಕರ ಸಮಯವೂ ಸಹ ಅತ್ಯಮೂಲ್ಯ' ಎಂಬ ಲೇಖನದಲ್ಲಿ ಬಿಗ್‌ಬಾಸ್‌ನಂತಹ ಜನಪ್ರಿಯ ಕಾರ್ಯಕ್ರಮವನ್ನು ಕೇವಲ ಮನರಂಜನೆಯ ದೃಷ್ಟಿಯಿಂದ ನೋಡದೆ, ನಮ್ಮ ಅಮೂಲ್ಯ ಸಮಯವನ್ನು ನಾವು ಹೇಗೆ ಬಳಸಿಕೊಳ್ಳುತ್ತಿದ್ದೇವೆ ಎಂಬ ಪ್ರಶ್ನೆಯನ್ನು ಲೇಖಕಿ ಮುಂದಿಡುತ್ತಾರೆ. ಪ್ರತಿಯೊಂದು ವಿಚಾರಕ್ಕೂ ತನ್ನದೇ ಆದ ದೃಷ್ಟಿಕೋನವನ್ನು ಹೊಂದಿರುವ ಲೇಖಕಿ, ಕಾರ್ಯಕ್ರಮದ ಒಳಿತು-ಕೆಡುಕುಗಳನ್ನು ಚರ್ಚಿಸುವುದರ ಜೊತೆಗೆ, ಸಮಯದ ಮೌಲ್ಯ ಮತ್ತು ಅದರ ಸದುಪಯೋಗದ ಕುರಿತು ಓದುಗರನ್ನು ಚಿಂತನೆಗೆ ಹಚ್ಚುತ್ತಾರೆ.

ಇಂದಿನ ಮಕ್ಕಳ ಬದುಕಿನ ಮತ್ತೊಂದು ಸೂಕ್ಷ್ಮ ಆಯಾಮವನ್ನು ತೆರೆದಿಡುವ ಲೇಖನ 'ಮುಗ್ಧ ಮಕ್ಕಳ ಬಾಲ್ಯ ಕಸಿಯದಿರಿ'. ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ನಡೆಯುವ ರಿಯಾಲಿಟಿ ಶೋಗಳ ಹಿಂದಿರುವ ಒತ್ತಡ, ಸ್ಪರ್ಧೆಯ ಮನೋಭಾವ, ಗೆಲುವು-ಸೋಲಿನ ಪರಿಣಾಮ ಮತ್ತು ಜನಪ್ರಿಯತೆಯ ಬೆನ್ನಟ್ಟುವಿಕೆಯ ಕು-ರಿತು ಲೇಖಕಿ ಗಂಭೀರವಾಗಿ ಚಿಂತಿಸಿದ್ದಾರೆ.



ಕೃತಿ ಹೆಸರು : ಕಣ್ಣಳತೆಗೆ ಕಂಡದ್ದು.
ಕೃತಿಕರ್ತೃ : ಶೋಭಾ ಶಂಕರಾನಂದ.
ಪುಸ್ತಕದ ಬೆಲೆ : 250.
ಪ್ರಕಾಶದ ಹೆಸರು: ಯದು ನಂದನ.
ಪುಟಗಳ ಸಂಖ್ಯೆ : 204. ಕೃತಿ ಬೇಕಾದಲ್ಲಿ ಸಂಪರ್ಕ : 94804 09091.

ಬಾಲ್ಯವೆಂದರೆ ಸಹಜತೆ, ಆಟ, ನಗು ಮತ್ತು ಮುಗ್ಧತೆಯ ಕಾಲ. ಆದರೆ ವೇದಿಕೆಯ ಮೇಲಿನ ಅತಿಯಾದ ಸ್ಪರ್ಧೆ ಮತ್ತು ನಿರೀಕ್ಷೆಗಳು ಮಕ್ಕಳ ಸಹಜ ಬಾಲ್ಯವನ್ನು ಕಸಿದುಕೊಳ್ಳಬಹುದೆಂಬ ಆತಂಕವನ್ನು ಇಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸಿದ್ದಾರೆ. ಕಾರ್ಯಕ್ರಮ ಮುಗಿದ ನಂತರವೂ ಮಕ್ಕಳ ಮನಸ್ಸಿನ ಮೇಲೆ ಉಳಿಯಬಹುದಾದ ಪರಿಣಾಮಗಳತ್ತ ಲೇಖಕಿ ಓದುಗರ ಗಮನ ಸೆಳೆಯುತ್ತಾರೆ.

'ಸಾವಿನ ಮನೆ ಸಾಕೋ9 ಪಾಡ್' ಎಂಬ ಲೇಖನ ತಂತ್ರಜ್ಞಾನದ ಮತ್ತೊಂದು ಸಂಕೀರ್ಣ ಮುಖವನ್ನು ಪರಿಚಯಿಸುತ್ತದೆ. ಸಾವಿನ ಕು-ರಿತು ಮಾನವನ ಚಿಂತನೆ, ಜೀವನದ ನೋವು, ಅಸಹಾಯಕತೆ ಮತ್ತು ತಂತ್ರಜ್ಞಾನ ಇವುಗಳ ನಡುವಿನ ಸಂಬಂಧವನ್ನು ಲೇಖಕಿ ಪ್ರಶ್ನಿಸುತ್ತಾರೆ. ಬದುಕಿನ ಅಂತ್ಯವನ್ನು ತಂತ್ರಜ್ಞಾನದ ಮೂಲಕ ನಿರ್ಧರಿಸುವ ಸಾಧ್ಯತೆಗಳ ಕುರಿತು ಓದುಗರಲ್ಲಿ ಹಲವು ನೈತಿಕ ಹಾಗೂ ಮಾನವೀಯ ಪ್ರಶ್ನೆಗಳನ್ನು ಹುಟ್ಟಿಸುವ ಈ ಲೇಖನ, ವಿಜ್ಞಾನದ ಪ್ರಗತಿಯ ಜೊತೆಗೆ ಮಾನವೀಯ ಮೌಲ್ಯಗಳ ಅಗತ್ಯವನ್ನೂ ನೆನಪಿಸುತ್ತದೆ.

ಹೀಗೆ 'ಕಣ್ಣಳತೆಗೆ ಕಂಡದ್ದು' ಕೇವಲ ಲೇಖನಗಳ ಸಂಕಲನವಲ್ಲ; ಲೇಖಕಿಯ ಸೂಕ್ಷ್ಮ ಅವಲೋಕನ, ಸಾಮಾಜಿಕ ಕಳಕಳಿ ಮತ್ತು ಚಿಂತನಶೀಲ ಮನಸ್ಸಿನ ಪ್ರತಿಬಿಂಬವಾಗಿದೆ. ಧರ್ಮದಿಂದ ತಂತ್ರಜ್ಞಾನದವರೆಗೆ, ಅಕ್ಕಮಹಾದೇವಿಯಿಂದ ಇಂದಿನ ಮಕ್ಕಳವರೆಗೆ, ಮನರಂಜನೆಯಿಂದ ಸಮಯದ ಮೌಲ್ಯದವರೆಗೆ ? ಹಲವು ವಿಭಿನ್ನ ವಿಚಾರಗಳನ್ನು ಒಂದೇ ಕೃತಿಯೊಳಗೆ ಲೇಖಕಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ಕಣ್ಣಿಗೆ ಕಂಡ ಸಂಗತಿಯನ್ನು ಹಾಗೆಯೇ ದಾಖಲಿಸುವುದಕ್ಕಿಂತ, ಅದರ ಹಿಂದಿರುವ ಅರ್ಥವನ್ನು ಅರಿಯುವ ಪ್ರಯತ್ನವೇ ಈ ಕೃತಿಯ ಜೀವಾಳ. ಪ್ರತಿಯೊಂದು ಲೇಖನವೂ ಓದುಗರ ಮನದಲ್ಲಿ ಒಂದಲ್ಲ ಒಂದು ಪ್ರಶ್ನೆಯನ್ನು ಹುಟ್ಟುಹಾಕುತ್ತದೆ; ಕೆಲವೊಮ್ಮೆ ಚಿಂತನೆಗೆ ಹಚ್ಚುತ್ತದೆ, ಕೆಲವೊಮ್ಮೆ ಅಚ್ಚರಿ ಮೂಡಿಸುತ್ತದೆ, ಮತ್ತೊಮ್ಮೆ ನಮ್ಮದೇ ಬದುಕಿನತ್ತ ತಿರುಗಿ ನೋಡುವಂತೆ ಮಾಡುತ್ತದೆ.

'ಕಣ್ಣಳತೆಗೆ ಕಂಡದ್ದು' ಓದಿದಾಗ ಕಣ್ಣಳತೆಗೆ ಕಂಡ ವಿಚಾರಗಳಾಚೆಗೂ ಬದುಕಿನ ಅನೇಕ ಆಯಾಮಗಳು ತೆರೆದುಕೊಳ್ಳುತ್ತವೆ. ಕೃತಿಯ ಹೊರಮೈಯನ್ನು ನೋಡಿದಷ್ಟೇ ಸಾಲದು; ಅದರೊಳಗಿನ ವಿಚಾರಧಾರೆಯ ಹೂರಣವನ್ನು ಸವಿಯಲು ಕೃತಿಯ ಪುಟಗಳನ್ನು ತಿರುವುದೇಬೇಕು. ಓದಿದಂತೆ ಅದರ ವೈಚಾರಿಕ ಸೊಗಡು ಮತ್ತು ಅನುಭವದ ಆಳ ಅರಿವಾಗುತ್ತದೆ.



# ಕೊಪ್ಪಳ ಜಿಲ್ಲೆಯಲ್ಲಿ ಬಯಲುಸೀಮೆಗೆ ಕೃಷಿಹೊಂಡಗಳ ನಿರ್ಮಾಣ ರೈತರಿಗೆ ವರದಾನ

ಅ.ಶ. ಸುದ್ದಿ ಕೊಪ್ಪಳ

ಕಲ್ಯಾಣ ಕರ್ನಾಟಕದ ಕೊಪ್ಪಳ ಜಿಲ್ಲೆಯು ಬಹುತೇಕ ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿದೆ. ಸದ್ಯದ ಬರಗಾಲದ ಪರಿಸ್ಥಿತಿಯಲ್ಲಿ ಆಶಾಕಿರಣದಂತೆ ಬಂದ ಯೋಜನೆ ಎಂದರೆ ವಿಬಿ–ಜಿ ರಾಮ್–ಜಿ ಯೋಜನೆ. ಈ ಯೋಜನೆಯಡಿ ರೈತರು ಕೃಷಿಹೊಂಡ ನಿರ್ಮಿಸಿಕೊಂಡು ಮಳೆನೀರನ್ನು ಸಂಗ್ರಹಿಸುವುದರ ಮೂಲಕ ತಮ್ಮ ಕೃಷಿ ಭೂಮಿಗೆ ಕೃಷಿಹೊಂಡವನ್ನೇ ವರದಾನವನ್ನಾಗಿಸಿಕೊಳ್ಳುತ್ತಿದ್ದಾರೆ.

ಇದಕ್ಕೆ ಉತ್ತಮ ಉದಾಹರಣೆ ಎಂದರೆ ಇತ್ತೀಚೆಗೆ ಕುಕನೂರು ತಾಲ್ಲೂಕಿನಲ್ಲಿ ವಿಬಿ–ಜಿ ರಾಮ್–ಜಿ ಯೋಜನೆಯಡಿ ನಿರ್ಮಾಣವಾದ 8 ಕೃಷಿ ಹೊಂಡಗಳು. ಜಿಲ್ಲಾ ಪಂಚಾಯತಿಯ ಕ್ರಿಯಾ ಯೋಜನೆಯಲ್ಲಿ ಜಿಲ್ಲೆಯಾದ್ಯಂತ ಒಟ್ಟು 876 ಕೃಷಿ ಹೊಂಡಗಳಿಗೆ ಯೋಜನೆ ರೂಪಿಸಲಾಗಿದೆ. ಅವುಗಳಲ್ಲಿ ಜಿಲ್ಲೆಯ ಕುಕನೂರು ತಾಲ್ಲೂಕಿನ ಇಟಗಿಯಲ್ಲಿ 6, ಮಂಗಳೂರು ಹಾಗೂ ಬಳಗೇ–



ರಿಯಲ್ಲಿ ತಲಾ ಒಂದು ಕೃಷಿಹೊಂಡವನ್ನು ವಿಬಿ–ಜಿ ರಾಮ್–ಜಿ ಯೋಜನೆಯಡಿ ನಿರ್ಮಿಸಲಾಗಿದೆ. ಬಾಕಿ ಕೃಷಿ ಹೊಂಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿವೆ. ಜಿಲ್ಲೆಯ ಎಲ್ಲ ರೈತರೂ ವಿಬಿ–ಜಿ ರಾಮ್ ಜಿ ಯೋಜನೆಯಡಿ ತಮ್ಮ ಕೃಷಿಭೂಮಿಯಲ್ಲಿ ಕೃಷಿಹೊಂಡಗಳನ್ನು ನಿರ್ಮಿಸಿಕೊಳ್ಳಬಹುದಾಗಿದೆ.

ಹನಿ ಹನಿ ಸೇರಿದರೆ ಹಳ್ಳ ಎಂಬ ಮಾತಿನಂತೆ ಬರಗಾಲದ ಈ ಪರಿಸ್ಥಿತಿಯಲ್ಲಿ ಅಪರೂಪಕ್ಕೆ ಸುರಿಯುವ ಮಳೆ ನೀರನ್ನು ಸಂಗ್ರಹಿಸಿ, ಕೃಷಿಗೆ ಸದ್ಬಳಕೆ ಮಾಡಿಕೊಳ್ಳಬಹುದು. ಮಳೆಯ ಕೊರತೆ ನಡುವೆ ಕೃಷಿ ಹೊಂಡಗಳು ರೈತರಿಗೆ ನೆರವಾಗಬಲ್ಲವು. ಪ್ರತಿ ಕೃಷಿ ಹೊಂಡಕ್ಕೆ ಸರ್ಕಾರದಿಂದ ರೂ.1,23,000/– ಗಳ ಘಟಕ ವೆಚ್ಚವನ್ನು ಸಹ ನೀಡಲಾಗುತ್ತದೆ. ಇದರಲ್ಲಿ ರೂ.1,14,000/– ಗಳನ್ನು ಕೃಷಿ ಹೊಂಡ ನಿರ್ಮಿಸಲು ಹಾಗೂ ರೂ.8957/– ಗಳನ್ನು ಪೈಪ್‌ಲೈನ್ ಸಂಪರ್ಕಕ್ಕೆ ಬಳಸಿಕೊಳ್ಳಬಹುದು.

### ಮಳೆ ನೀರಿನ ಸದ್ಬಳಕೆಗೆ ರೈತರಿಗೆ ಸಲಹೆ

ನೀರಿನ ಪ್ರತಿ ಹನಿಯೂ ಅತ್ಯಮೂಲ್ಯವಾಗಿದ್ದು, ವೈಜ್ಞಾನಿಕ ಉಪಕ್ರಮದ ಮೂಲಕ ದಿಬ್ಬದಿಂದ ಕಣಿವೆ ಮೂಲಕ ಕೃಷಿಹೊಂಡ ಅನುಷ್ಠಾನಗೊಳಿಸಿ ಮಳೆಗಾಲದಲ್ಲಿ ಓಡುವ ನೀರನ್ನು ನಿಲ್ಲಿಸಿ, ನಿಂತ ನೀರನ್ನು ಇಂಗಿಸಿ, ಅಂತರ್ಜಲ ಪ್ರಮಾಣ ವೃದ್ಧಿಸಿ, ನೀರಿನ ಸದ್ಬಳಕೆಯ ಮಹತ್ವವನ್ನು ಕೃಷಿಹೊಂಡ ನಿರ್ಮಾಣ ಕಾರ್ಯಕ್ರಮದ ಮೂಲಕ ಕಂಡುಕೊಳ್ಳಬಹುದಾಗಿದೆ.

● ಡಾ.ಸುರೇಶ ಬಿ.ಇಟ್ನಾಳ, ಜಿಲ್ಲಾಧಿಕಾರಿಗಳು, ಕೊಪ್ಪಳ

### ರೈತರ ಸಬಲೀಕರಣಕ್ಕೆ ಅನುಕೂಲ

ವಿಬಿ–ಜಿ ರಾಮ್–ಜಿ ಯೋಜನೆಯಡಿ ಅನುಷ್ಠಾನಗೊಂಡ ಕೃಷಿ ಹೊಂಡ ನಿರ್ಮಾಣ ಕಾರ್ಯಕ್ರಮವು ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣಾ ಕಾಮಗಾರಿಯಾಗಿದ್ದು, ಇದು ರೈತ–ರಿಗೆ ಅತ್ಯುಪಯುಕ್ತವಾಗಿದೆ. ಹೊಲದಲ್ಲಿ ಮಣ್ಣಿನ ಫಲವತ್ತತೆ, ತೇವಾಂಶ, ಮಣ್ಣಿನ ಸವಕಳಿ, ಅಂತರ್ಜಲ ಪ್ರಮಾಣ ವೃದ್ಧಿಗೊಂಡು ರೈತರು ಬರಗಾಲದಲ್ಲಿ, ಬೇಸಿಗೆಯಲ್ಲಿ ಹೆಚ್ಚಿನ ಫಸಲನ್ನು ಬೆಳೆದು, ಆರ್ಥಿಕವಾಗಿ ಸಬಲರಾಗುವಲ್ಲಿ ಸಹಕಾ–ರಿಯಾಗಿದೆ.

● ವರ್ಣಿತ್ ನೇಗಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಕೊಪ್ಪಳ

## ಯಮುನಾ ಎಕ್ಸ್‌ಪ್ರೆಸ್‌ವೇಯಲ್ಲಿ ಸ್ಲೀಪರ್ ಬಸ್‌ಗೆ ಬೆಂಕಿ : 9 ಪ್ರಯಾಣಿಕರ ಸಾವು

ಅ.ಶ. ಸುದ್ದಿ ನೊಯ್ಡಾ

**ನೊಯ್ಡಾ: ದೆಹಲಿಯಿಂದ ಬಿಹಾರದ ಮಹೋಬಾಗೆ ತೆರಳುತ್ತಿದ್ದ ಸ್ಲೀಪರ್ ಬಸ್‌ಗೆ ಯಮುನಾ ಎಕ್ಸ್‌ಪ್ರೆಸ್‌ವೇಯಲ್ಲಿ ಬೆಂಕಿ ಹೊತ್ತಿಕೊಂಡ ಪರಿಣಾಮ ಒಂಬತ್ತು ಪ್ರಯಾಣಿಕರು ಮೃತಪಟ್ಟಿದ್ದು, 20 ಮಂದಿಯನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಇಂದು ಮುಂಜಾನೆ ಜೆವಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಎಕ್ಸ್‌ಪ್ರೆಸ್‌ವೇಯ 33ನೇ ಕಿಲೋಮೀಟರ್ ಮೈಲಿಗಲ್ಲಿನ ಬಳಿ ಈ ಘಟನೆ ನಡೆದಿದೆ. ನವದೆಹಲಿಯ ಕಾಶ್ಮೀರಿ ಗೇಟ್‌ನಿಂದ ಹೊರಟಿದ್ದ ಬಸ್ (328647) ಬೆಂಕಿಗೆ ಆಹುತಿಯಾಗಿದೆ.**



ಮಾಹಿತಿ ಲಭಿಸಿದ ತಕ್ಷಣ ಪೊಲೀಸರು, ರಕ್ಷಣಾ ವಾಹನ ಹಾಗೂ ಜೆವಾರ್ ಟೋಲ್ ಪ್ಲಾಜಾದಲ್ಲಿದ್ದ ಅಗ್ನಿಶಾಮಕ ವಾಹನ ಸೇರಿದಂತೆ ಐದು ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿವೆ.ಹೊಗೆ ಆವರಿಸಿದ್ದ ಬಸ್‌ನೊಳಗೆ ಪ್ರವೇಶಿಸಿದಾಗ ಒಂಬತ್ತು ಮಂದಿ ಮೃತಪಟ್ಟಿರುವುದು ಪತ್ತೆಯಾಗಿದೆ. ಸುಟ್ಟ ಗಾಯ ಅಥವಾ ಉಸಿರುಗಟ್ಟುವಿಕೆಯಿಂದ ಅವರು ಮೃತಪಟ್ಟಿರಬಹುದು ಎಂದು ಮುಖ್ಯ ಅಗ್ನಿಶಾಮಕ ಅಧಿಕಾರಿ ಪ್ರದೀಪ್ ಕುಮಾರ್ ತಿಳಿಸಿದ್ದಾರೆ. ಬಸ್‌ನ ಹವಾನಿಯಂತ್ರಣ ವ್ಯವಸ್ಥೆಯಲ್ಲಿ ಉಂಟಾದ ಕಿಡಿ ಅಥವಾ ಸ್ಫೋಟದಿಂದ ಎಂಜಿನ್‌ನ ಲೂಬ್ರಿಕಂಟ್ ಎಣ್ಣೆಗೆ ಬೆಂಕಿ ಹೊತ್ತಿಕೊಂಡು, ಬಳಿಕ ವೇಗವಾಗಿ ಇಡೀ ಬಸ್‌ಗೆ ಬೆಂಕಿ ವ್ಯಾಪಿಸಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಮೃತರ ಗುರುತು ಪತ್ತೆಹಚ್ಚಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿದ್ದು, ಬಸ್ ಚಾಲಕ ಹಾಗೂ ನಿರ್ವಾಹಕರನ್ನು ವಶಕ್ಕೆ ಪಡೆಯಲಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ಪರಿಹಾರ ಘೋಷಿಸಿದ್ದು, ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಹಾಗೂ ಮೃತರ ಕುಟುಂಬಗಳಿಗೆ ಅಗತ್ಯ ನೆರವು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

## ‘ವಚನಾಮೃತ’

ಅಂಬಲಿ ಗಡಿಗೆಯೊಂದರೊಳ್ ಕೂತು
ಸಟಗದಿಂ ಕೈಯಾಡಿಸಿದೊಡೆ ಮುದ್ದೆ
ಬಪ್ಪುದೇನಯ್ಯ !.
ಹೆಬ್ಬುಲಿ ಬಾಯೊಳ್ ಕೂತು
ಭಗವದ್ಗೀತೆ ಅರುಹಿದೊಡೆ ತಿನ್ನದೆ
ಬಿಟ್ಟಿತೆ ಮಂಕೆ ಸತ್ಯವಾಣಿ!!.



ವಾಣಿ ಭಂಡಾರಿ.

# ರೈತರ ಹಿತವೇ ಸಹಕಾರಿ ಸಂಘದ ಮುಖ್ಯ ಗುರಿ: ಸಿದ್ದಯ್ಯ ಕಳ್ಳಿಮಠ

ಅ.ಶ. ಸುದ್ದಿ ಕುಕನೂರು

**ಕುಕನೂರು: ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಿವಿಧ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಆರ್ಥಿಕ ಚಟುವಟಿಕೆಗಳನ್ನು ಬಲಪಡಿಸಿಕೊಳ್ಳಬೇಕು ಎಂದು ಸಂಘದ ಅಧ್ಯಕ್ಷ ಸಿದ್ದಯ್ಯ ಕಳ್ಳಿಮಠ ಹೇಳಿದರು. ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 50ನೇ ವಾರ್ಷಿಕ ವರದಿ ಹಾಗೂ 2025–26ನೇ ಸಾಲಿನ ವಾರ್ಷಿಕ ಅಢಾವೆ ವರದಿ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.**

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿದೆ. ಈ ಸಹಕಾರಿ ಸಂಘವನ್ನು ಪ್ರಥಮವಾಗಿ ಕಣಗಿನಹಾಳ ಸಿದ್ದನಗೌಡರು ಆರಂಭಿಸಿದ್ದು, ಇಂದು ಅದು ರಾಜ್ಯಾದ್ಯಂತ ರೈತರ ಹಿತಾಸಕ್ತಿಗೆ ಪೂರಕವಾಗಿ ವಿಸ್ತಾರಗೊಂಡಿರುವುದಕ್ಕೆ ಅವರ ದೂರದೃಷ್ಟಿಯೇ ಕಾರಣವಾಗಿದೆ. ಸಂಘದ ಬೆಳವಣಿಗೆಯ ಎಲ್ಲ ಕೀರ್ತಿಯೂ ಅವರಿಗೆ ಸಲ್ಲುತ್ತದೆ ಎಂದರು. ರೈತರಿಗಾಗಿ, ರೈತರಿಗೋಸ್ಕರವೇ ಸಂಘ ಕಾರ್ಯನಿರ್ವಹಿಸುತ್ತಿದ್ದು, ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

ಜಮೀನಿನ ಮೇಲೆ ಸಾಲ ಪಡೆದಿರುವ ರೈತ ಮೃತಪಟ್ಟ ಸಂದರ್ಭದಲ್ಲಿ 50 ಸಾವಿರ ವಿಮಾ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 18 ರೈತರಿಗೆ ವಿಮಾ ಸೌಲಭ್ಯ ನೀಡಲಾಗಿದೆ ಎಂದು ತಿಳಿಸಿದರು. ಇದೇ ವೇಳೆ ಸಂಘದ ಸದಸ್ಯರಿಗೂ ವಿಮಾ



ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದ್ದು, ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ರೈತರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ, ಗುಣಮಟ್ಟದ ಕೃಷಿ ಪರಿಕರ ಸಹಕಾರ ಸಂಘದ ನಿರ್ದೇಶಕ ಕಳಕಪ್ಪ ಕುಂಬಾರ ಮಾತನಾಡಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ರೈತಪರ ಯೋಜನೆಗಳನ್ನು ಜಾರಿಗೆ ತರುವ ಮೂಲಕ ರೈತರಿಗೆ ದಾರಿ ದೀಪವಾಗಿದೆ ಎಂದರು.

ಸಂಘದ ಸದಸ್ಯರು ಹಾಗೂ ಕೃಷಿಕ–ರಿಗೆ ಉತ್ತಮ ಗುಣಮಟ್ಟದ ಬೀಜ, ಗೊಬ್ಬರ ಸೇರಿದಂತೆ ಕೃಷಿಗೆ ಅಗತ್ಯವಾದ ಪರಿಕರಗಳನ್ನು ಒದಗಿಸಲಾಗುತ್ತಿದೆ. ಕಡಿಮೆ ಬಡ್ಡಿದರದಲ್ಲಿ ವಿವಿಧ ಸಾಲ ಸೌಲಭ್ಯಗಳನ್ನು ನೀಡುವ ಮೂಲಕ ರೈತರ ಕೃಷಿ ಚಟುವಟಿಕೆಗಳಿಗೆ ಸಂಘ ಬೆಂಬಲವಾಗಿ ನಿಂತಿದೆ ಎಂದು ಹೇಳಿದರು. ಸಂಘದಿಂದ ಸುಮಾರು 1.50 ಕೋಟಿ ಠೇವಣಿ ಸಂಗ್ರಹ ಮಾಡಲಾಗಿದ್ದು, ಸದಸ್ಯರಿಗೆ ವಿವಿಧ ಸಾಲ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಸಾಮಾನ್ಯ ಠೇವಣಿದಾರರಿಗೆ ಶೇ.9ರಷ್ಟು ಬಡ್ಡಿ, ಹಿರಿಯ ನಾಗರಿಕರಿಗೆ ಶೇ.9.50ರಷ್ಟು ಬಡ್ಡಿ ನೀಡಲಾಗುತ್ತಿದೆ. ರೈತರಿಗೆ ಗೊಬ್ಬರ ಹಾಗೂ ಕೀಟನಾಶಕಗಳನ್ನು ಸಮರ್ಪಕ ಬೆಲೆಯಲ್ಲಿ ವಿತರಿಸಲಾಗುತ್ತಿದೆ ಎಂದರು.

ಸಣ್ಣ ಉದ್ಯಮಿಗಳಿಗೂ ಸಾಲ ಸೌಲಭ್ಯ ನಿರ್ದೇಶಕ ಶ್ರೀನಿವಾಸ ದೇಸಾಯಿ ಮಾತನಾಡಿ, ಸಿದ್ದನಗೌಡ ಪಾಟೀಲರು ರೈತರಿಂದ, ರೈತ–ರಿಗಾಗಿ ಹಾಗೂ ರೈತರಿಗೋಸ್ಕರ ಆರಂಭಿಸಿದ ಸಹಕಾರಿ ಸಂಘ ಇಂದು ವಿವಿಧ ವರ್ಗದ ಜನರಿಗೆ ಅನುಕೂಲ ಕಲ್ಪಿಸುತ್ತಿದೆ ಎಂದರು. ಸಣ್ಣ ಉದ್ಯಮಿಗಳ ಅನುಕೂಲಕ್ಕಾಗಿ ಕಡಿಮೆ ದಾಖಲೆಗಳೊಂದಿಗೆ, ಕಡಿಮೆ ಬಡ್ಡಿದರದಲ್ಲಿ ಶೀಘ್ರವಾಗಿ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. ಇದರಿಂದ ಸಣ್ಣ ಉದ್ಯಮಗಳನ್ನು ನಡೆಸುತ್ತಿರುವವರಿಗೆ ಆರ್ಥಿಕ ನೆರವು ದೊರೆಯುತ್ತಿದೆ ಎಂದು ಹೇಳಿದರು. ರೈತರು ಸಹಕಾರಿ ಸಂಘದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಠೇವಣಿ ಮಾಡುವ ಮೂಲಕ ತಮ್ಮ ಹಣಕ್ಕೆ ಉತ್ತಮ ಬಡ್ಡಿ ಪಡೆಯಬೇಕು. ಅಗತ್ಯವಿರುವ ಸಂದರ್ಭದಲ್ಲಿ ಸಂಘದ ವಿವಿಧ ಸಾಲ ಸೌಲಭ್ಯಗಳನ್ನು ಪಡೆದುಕೊಂಡು ಕೃಷಿ ಹಾಗೂ ಇತರ ಚಟುವಟಿ–ಕೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಾರ್ಷಿಕ ವರದಿ ಮಂಡನೆ ಕಾರ್ಯಕ್ರಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂಘದ ವಾರ್ಷಿಕ ವರದಿ ಹಾಗೂ 2025–26ನೇ ಸಾಲಿನ ಅಢಾವೆ ವರದಿಯನ್ನು ಮಂಡಿಸಿ, ಸಂಘದ ಆರ್ಥಿಕ ಚಟುವಟಿಕೆಗಳು, ಸದಸ್ಯರಿಗೆ ನೀಡಿರುವ ವಿವಿಧ ಸೌಲಭ್ಯಗಳು ಹಾಗೂ ಸಾಲ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ವಿಶೇಷ ವ್ಯಕ್ತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಭರಮಪ್ಪ ತಳವಾರ, ನಿರ್ದೇಶಕರಾದ ದಸ್ತಗಿರಸಾಬ ರಾಜೂರ, ರಾಮಣ್ಣ ಬಜೇಂತ್ರಿ, ಗುದ್ನೇಪ್ಪ ಚಲವಾದಿ, ಬಸವರಾಜ ನೋಟಗಾರ, ಮಲ್ಲಿಕಾರ್ಜುನ ಹಾದಿ, ಬಸವರಾಜ ಈಬೇರಿ, ರತ್ನಮ್ಮ ಗದಗ, ಶೀಶಾದಬೇಗಂ, ಆರ್.ಡಿ.ಸಿ.ಸಿ. ಹಣಕಾಸು ಪ್ರತಿನಿಧಿ ರಘುನಾಥ ಎನ್.ಎಸ್., ಸಹಕಾರ ಸಂಘದ ಸಿಬ್ಬಂದಿ, ರೈತರು, ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಏಷ್ಯನ್ ಗೇಮ್ಸ್ : ವಿವಾದ ನಡುವೆಯೂ ಬೆಳ್ಳಿ ಗೆದ್ದ ರೋಶಿಬಿನಾ ದೇವಿ

ಅ.ಶ. ಸುದ್ದಿ ನಗೋ.ಯಾ

**ನಗೋಯಾ: ಏಷ್ಯನ್ ಕ್ರೀಡಾಕೂಟದ ರಾಷ್ಟ್ರೀಯ ತಂಡಕ್ಕೆ ತಮ್ಮ ಆಯ್ಕೆಯ ಸುತ್ತಲಿನ ವಿವಾದವನ್ನು ಬದಿಗಿಟ್ಟು, ಸ್ಟಾರ್ ವುಶು ಕ್ರೀಡಾಪಟು ರೋಶಿಬಿನಾ ದೇವಿ ಬೆಳ್ಳಿ ಪದಕ ಗೆದ್ದಿದ್ದಾರೆ.ಮಹಿಳೆಯರ 60 ಕೆಜಿ ಸಾಂಡಾ ವಿಭಾಗದ ಫೈನಲ್‌ನಲ್ಲಿ ರೋಶಿಬಿನಾ ದೇವಿ ಚೀನಾದ ಪ್ರಬಲ ಆಟಗಾರ್ತಿ ಝೂಂಗ್ ಕ್ಸಿಯಾವೊಯು ವಿರುದ್ಧ 0–2 ಅಂತರದಲ್ಲಿ ಸೋಲನುಭವಿಸಿದರು.**

ಆಯ್ಕೆ ಪ್ರಕ್ರಿಯೆಯಲ್ಲಿ ಯುವ ಆಟಗಾರ್ತಿ ದಿವ್ಯಾಂಶಿ ಚೌಧರಿ ವಿರುದ್ಧ ಸೋತಿದ್ದ ರೋಶಿಬಿನಾ, ಬಳಿಕ ಎದುರಾಳಿ ಆಟಗಾರ್ತಿಗೆ



ಗಾಯವಾದ ಕಾರಣ ಏಷ್ಯನ್ ಕ್ರೀಡಾಕೂಟದ ತಂಡದಲ್ಲಿ ಸ್ಥಾನ ಪಡೆದಿದ್ದರು.ಭಾರತೀಯ ತಂಡದಿಂದ ಕೈಬಿಡಲ್ಪಟ್ಟ ಬಳಿಕ ದಿವ್ಯಾಂಶಿ, ರೋಶಿಬಿನಾ ತಮ್ಮನ್ನು ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ್ದರು. 2018ರ ಜಕಾರ್ತಾ–ಪಾಲೆಂಬಾಂಗ್ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚು ಹಾಗೂ 2023ರ ಹ್ಯಾಂಗ್‌ಝೌ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದಿದ್ದ ರೋಶಿಬಿನಾಗೆ ಇದು ಮೂರನೇ ಏಷ್ಯನ್ ಕ್ರೀಡಾಕೂಟದ ಪದಕವಾಗಿದೆ. ಫೈನಲ್‌ಗೆ ತಲುಪುವ ಹಾದಿಯಲ್ಲಿ ಅವರು ವಿಯೆಟ್ನಾಂನ 2023ರ ವಿಶ್ವ ಚಾಂಪಿಯನ್ ನ್ಗುಯೆನ್ ಥಿ ಥು ಥುಯ್ ಅವರನ್ನು ಸೋಲಿಸಿದ್ದರು.

ಇತರ ಸ್ಪರ್ಧಿಗಳು ಪದಕ ಗೆಲ್ಲಲು ವಿಫಲರಾಗಿದ್ದ ಸಂದರ್ಭದಲ್ಲಿ ರೋಶಿಬಿನಾ ಭಾರತೀಯ ವುಶು ತಂಡಕ್ಕೆ ಸಂಭ್ರಮಿಸಲು ಕಾರಣರಾದರು.ಇತರ ಸಾಂಡಾ ಸ್ಪರ್ಧಿಗಳಾದ ಆರ್ಯನ್ (ಪುರುಷರ 56 ಕೆಜಿ) ಕ್ವಾರ್ಟರ್ ಫೈನಲ್‌ನಲ್ಲಿ ಸೋತರೆ, ಅಪರ್ಣಾ (ಮಹಿಳೆಯರ 52 ಕೆಜಿ) 16ರ ಸುತ್ತಿನಲ್ಲಿ ಹೊರಬಿದ್ದರು. ವಿಕ್ರಾಂತ್ ಬಲಿಯಾನ್ (ಪುರುಷರ 75 ಕೆಜಿ) ಮೊದಲ ಸುತ್ತಿನಲ್ಲೇ ಸೋಲನುಭವಿಸಿದರು. ಭಾರತದ ಟಾವೊಲು ತಂಡವು ಯಾವುದೇ ಪದಕದ ಸುತ್ತು ತಲುಪಲು ಸಾಧ್ಯವಾಗಲಿಲ್ಲ. ಲಾಂಗ್ಲೆಂಟೊಂಬಿ ದೇವಿ ಹಂಜಬಾಮ್ ಮಹಿಳೆಯರ ನಾನ್‌ಕ್ವಾನ್ ಮತ್ತು ನಾಂಡಾವೊ ಸ್ಪರ್ಧೆಗಳಲ್ಲಿ ಒಟ್ಟು 18.839 ಅಂಕ ಗಳಿಸಿ ಒಂಬತ್ತನೇ ಸ್ಥಾನ ಪಡೆದರು. ನೈಮನ್ ವಾಂಗ್ಸು ಮಹಿಳೆಯರ ಚಾಂಗ್‌ಕ್ವಾನ್ ಸ್ಪರ್ಧೆಯಲ್ಲಿ 9.573 ಅಂಕಗಳೊಂದಿಗೆ 15ನೇ ಸ್ಥಾನ ಪಡೆದರು. ಪುರುಷರ ಚಾಂಗ್‌ಕ್ವಾನ್ ಫೈನಲ್‌ನಲ್ಲಿ ಸ್ಪರ್ಧಿಸಿದ ಸೂರಜ್ ಸಿಂಗ್ ಮಯಂಗ್ಲಂಬಮ್ 11ನೇ ಸ್ಥಾನ ಪಡೆದರು.

# ಆಯುರ್ವೇದವು ಸಮಗ್ರ ಆರೋಗ್ಯಕ್ಕೆ ಭದ್ರ ಬುನಾದಿ: ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತ ಹಿರೇಗೌಡರ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಆಯುರ್ವೇದವು ಸಮಗ್ರ ಆರೋಗ್ಯಕ್ಕೆ ಭದ್ರ ಬುನಾದಿಯಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತ ಬ. ಹಿರೇಗೌಡರ ಅವರು ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಎನ್.ಐ.ಎಂ.ಎ., ಎ.ಎಫ್.ಐ., ಅಗಸ್ತ್ಯ ಆಯುರ್ವೇದ ಮಹಾವಿದ್ಯಾಲಯ, ದದೇಗಲ್‌ನ ಎಸ್.ಎ. ನಿಂಗೋಜಿ ಆಯುರ್ವೇದ ಮಹಾವಿದ್ಯಾಲಯ ಹಾಗೂ ಶ್ರೀ ಜಗದ್ಗುರು ಗವಿಸಿದ್ದೇಶ್ವರ ಆಯುರ್ವೇದ ಮಹಾವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಬುಧವಾರ (ಸೆ. 23ರಂದು) ಹಮ್ಮಿಕೊಂಡಿದ್ದ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**

“ಸ್ವಸ್ಥ ನಾಳೆಗಳಿಗಾಗಿ ಆಯುರ್ವೇದ” ಎಂಬ ಧ್ಯೇಯವಾಕ್ಯದೊಂದಿಗೆ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಆಚ–ರಿಸಲಾಗುತ್ತಿದೆ. ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಆಯುರ್ವೇದ ಸಸ್ಯವನ




ನಿರ್ಮಿಸಲು ಜಿಲ್ಲಾಧಿಕಾರಿಗಳು ಅನುಮತಿ ನೀಡಿದ್ದಾರೆ. ಜೊತೆಗೆ ಚಿಕ್ಕಮಾದಿನಾಳದ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ 1 ಎಕರೆ ಜಾಗದಲ್ಲಿ ಸಸ್ಯವನ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ. ಇಂದ್ರಕೀಲ ಪರ್ವತದ ಕಲ್ಲಿನಲ್ಲಿ ಆಯುರ್ವೇದ ಸಸ್ಯ ಬೆಳೆಸಿ ಜಾಗತಿಕ ತಾಪಮಾನ ತಗ್ಗಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು. ವೇದಿಕೆ ಕಾರ್ಯಕ್ರಮವನ್ನು ಎನ್.ಐ.ಎಂ.ಎ ಅಧ್ಯಕ್ಷ ಡಾ. ಶಿವನಗೌಡ ಪಾಟೀಲ್ ಹಾಗೂ ಎ.ಎಫ್.ಐ ಅಧ್ಯಕ್ಷ ಡಾ. ವಿಶ್ವನಾಥ ನಾಲವಾಡ ಅವರು ಪಂಚವಟಿ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ವಿಷಯ ತಜ್ಞರಿಂದ ಉಪನ್ಯಾಸ: ಕಾರ್ಯಕ್ರಮದ ಅಂಗವಾಗಿ ಗಂಗಾವತಿ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಗುರುರಾಜ ಎ. ಉಮಚಗಿ ಅವರು ‘ಗಂಗಾವತಿ ಪಕ್ಷಾಘಾತ ಚಿಕಿತ್ಸಾ ಕೇಂದ್ರ’ದ ಕುರಿತು ಉಪನ್ಯಾಸ ನೀಡಿದರು. ಎಸ್.ಎ. ನಿಂಗೋಜಿ ಆಯುರ್ವೇದ ಕಾಲೇಜಿನ



ಅಧ್ಯಾಪಕ ಡಾ. ಮಂಜುನಾಥ ಸಜ್ಜನ್ ಅವರು ‘ಜಾಗತಿಕ ಆಯುರ್ವೇದಕ್ಕಾಗಿ ಆಯುರ್ವೇದ ನಾವೀನ್ಯತೆ’ ವಿಷಯದ ಕುರಿತು ಮಾತನಾಡಿದರು. ಯಲಬುರ್ಗಾ ಆಸ್ಪತ್ರೆಯ ಡಾ. ಶಿಲ್ಪಾ ಬಾಚಲಾಪುರ ಅವರು ಪಂಚಕರ್ಮ ಮತ್ತು ಯೋಗದಿಂದ ಸಿಗುವ ದೈಹಿಕ ಹಾಗೂ ಮಾನಸಿಕ ನೆಮ್ಮದಿಯ ಮಹತ್ವವನ್ನು ವಿವರಿಸಿದರು. ಗಂಗಾವತಿ ತಜ್ಞ ವೈದ್ಯೆ ಡಾ. ವೀಣಾ ಬಿಜ್ಜಳ ಮಾತನಾಡಿ, ಆಯುರ್ವೇದವು ಕೇವಲ ಚಿಕಿತ್ಸೆಯಲ್ಲ, ಅದು ದೈನಂದಿನ ಶಿಸ್ತುಬದ್ಧ ಜೀವನಶೈಲಿ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಅಗಸ್ತ್ಯ ಆಯುರ್ವೇದ ಕಾಲೇಜಿನ ಪ್ರಾಧ್ಯಾಪಕ ಡಾ. ಪ್ರಭು ನಾಗಲಾಪುರ ಹಾಗೂ ಗೌರೀಪುರ ವೈದ್ಯಾಧಿಕಾರಿ ಡಾ. ಯಮನಪ್ಪ ಜೆ. ಶಿರವಾರ ಉಪಸ್ಥಿತರಿದ್ದರು. ಆಯುಷ್ ವೈದ್ಯಾಧಿಕಾರಿಗಳ ತಂಡದವರು ಪ್ರಾರ್ಥ–ನೆ ಗೀತೆಯನ್ನು ಹಾಡಿದರು. ಡಾ. ಗುರುರಾಜ ಉಮಚಗಿ ಕಾರ್ಯಕ್ರಮ ನಿರೂಪಿಸಿದರು, ಡಾ. ಮಾರುತಿ ದೊಡ್ಮನಿ ವಂದನಾರ್ಪಣೆ ಮಾಡಿದರು. ಜಿಲ್ಲೆಯ ಆಯುಷ್ ವೈದ್ಯರು ಹಾಗೂ ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಾಗೃತಿ ಜಾಥಾ: ಕಾರ್ಯಕ್ರಮಕ್ಕೂ ಮುನ್ನ ಶ್ರೀ ಗವಿಮಠದ ಆವರಣದಿಂದ ಆಯೋಜಿಸಲಾಗಿದ್ದ ಜಾಗೃತಿ ಜಾಥಕ್ಕೆ ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತ ಬ. ಹಿರೇಗೌಡರ ಅವರು ಡೊಳ್ಳು ಬಾರಿಸಿ, ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಜಾಥಾವು ಗಂಜ್ ವೃತ್ತದ ಮಾರ್ಗವಾಗಿ ಜಿಲ್ಲಾಡಳಿತ ಭವನದ ವರೆಗೆ ಅದ್ದೂರಿಯಾಗಿ ನಡೆಯಿತು. ಈ ಜಾಥಾದಲ್ಲಿ 400ಕ್ಕೂ ಹೆಚ್ಚು ಆಯುಷ್ ವೈದ್ಯಾಧಿಕಾರಿಗಳು, ಸಿಬ್ಬಂದಿ ಹಾಗೂ ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka